ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕನ್ನಡ ದಿನಪತ್ರಿಕೆ

ಕೊಪ್ಪಳ | ರಾಯಚೂರು | ಬಳ್ಳಾರಿ | ವಿಜಯನಗರ | ಯಾದಗಿರಿ | ಬೆಂಗಳೂರು | ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ. ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 148 | Friday 25-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಸಂಕ್ಷಿಪ್ತ ವಾರ್ತೆ

### ಬಿಜೆಪಿ ವಿರುದ್ಧ ಬಂಡಾಯ ಟಿ.ಯರ್ರಿ ಸ್ವಾಮಿ ಪಕ್ಷೇತರ ಹಾದಿ



● ವಾರ್ತಾಲೋಕ ವಾರ್ತೆ

:ಬಿಜೆಪಿ ಪಕ್ಷದಲ್ಲಿ ಕಳೆದ 20 ವರ್ಷಗಳಿಂದ ಕಾರ್ಯನಿರ್ವಹಿಸಿದ್ದೇನೆ, ಈ ಹಿಂದೆ ಕಾರ್ತಿಕ್ ಘೋರ್ಪಡೆಯವರು ನನಗಾಗಲಿ, ಸ್ಥಳೀಯರಿಗೆ ಟಿಕೇಟ್ ಕೊಡುತ್ತೇವೆ ಎಂದು ಈಗ ಬೇರೆಯವರಿಗೆ ಟಿಕೇಟ್ ನೀಡಿದ್ದಾರೆ ಇದರಿಂದ ಕ್ಷೇತ್ರದ ಜನತೆಗೆ ಮಾಡಿದ ಅನ್ಯಾವಾಗಿದೆ ಅದ್ದರಿಂದ ಬಿಜೆಪಿ ರೆಬೆಲ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತೇನೆ ಎಂದು ಸಂಡೂರು ತಾಲೂಕು ಸೋಮಲಾಪುರ ಗ್ರಾಮದ ಟಿ.ಯರ್ರಿಸ್ವಾಮಿಯವರು ತಿಳಿಸಿದರು.

ಅವರು ಪಟ್ಟಣದ ವಿಜಯವೃತ್ತದಿಂದ ಬೃಹತ್ ಮೆರವಣಿಗೆಯೊಂದಿಗೆ ನೂರಾರು ಕಾರ್ಯಕರ್ತರೊಂದಿಗೆ ಮೆರವಣಿಗೆ ಮಾಡಿದರು ಈ ಸಂದರ್ಭದಲ್ಲಿ ಅವರು ಮಾತನಾಡಿ ಸ್ಥಳೀಯರಾದಲ್ಲಿ ಸ್ಥಳೀಯರ ಸಮಸ್ಯೆಗಳು ಪೂರ್ಣವಾಗಿ ತಿಳಿದಿವೆ, ಅಲ್ಲದೆ ಸಂಡೂರು ಕ್ಷೇತ್ರವನ್ನು ಸುಂದರ ಕ್ಷೇತ್ರವನ್ನಾಗಿಸುವ, ಮೂಲಭೂತ ಸೌಲಭ್ಯ, ಅಭಿವೃದ್ಧಿ ಪರ ಕಾರ್ಯಗಳನ್ನು ಮಾಡಲು ನಾನು ಪಕ್ಷೇತರವಾಗಿ ಸ್ಪರ್ಧಿಸುತ್ತಿದ್ದೇನೆ, ಪ್ರತಿ ಮನೆಯಿಂದ ರೈತರು ಬುತ್ತಿಕಟ್ಟಿಕೊಂಡು ಬಂದು ಪ್ರಚಾರ ಮಾಡುತ್ತೇವೆ ಎಂದು ತಿಳಿಸಿದ್ದಾರೆ, ಅದ್ದರಿಂದ ಇಂದು ನಾನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ವಿಜಯಶಾಲಿಯಾಗುತ್ತೇನೆ, ಕಾರಣ ಕಾಂಗ್ರೇಸ್ ಪಕ್ಷಕ್ಕೆ ವಿರೋಧಿ ಅಲೆ, ಬಿಜೆಪಿ ಅಭ್ಯರ್ಥಿ ಸ್ಥಳೀಯರಲ್ಲ ಎನ್ನುವುದು, ಅಭಿವೃದ್ಧಿ ಶೂನ್ಯವಾದ ಕಾರಣ ಕಡ್ಡಾಯವಾಗಿ ಜಯಶೀಲನಾಗುತ್ತೇನೆ ಎಂದರು.

### ಸಂಡೂರು ವಿಧಾನಸಭೆ ಉಪಚುನಾವಣೆ ಮಾದರಿ ನೀತಿ ಸಂಹಿತೆ ಉಲ್ಲಂಘನೆ; 8 ಪ್ರಕರಣ ದಾಖಲು

● ವಾರ್ತಾಲೋಕ ವಾರ್ತೆ



**ಬಳ್ಳಾರಿ,ಅ.24** ಸಂಡೂರು ವಿಧಾನಸಭೆ ಉಪಚುನಾವಣೆ ಅಂಗವಾಗಿ ಮಾದರಿ ನೀತಿ ಸಂಹಿತೆಯು ಕಟ್ಟುನಿಟ್ಟಾಗಿ ಜಾರಿಯಲ್ಲಿದ್ದು, ಬುಧವಾರ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಅನಧಿಕೃತವಾಗಿ ಸಾಗಿಸುತ್ತಿದ್ದ 2616.93 ಲೀಟರ್ (ರೂ.7,76,648 ಮೌಲ್ಯ) ಮದ್ಯ ವಶಪಡಿಸಿಕೊಂಡು 8 ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅಬಕಾರಿ ಪೊಲೀಸ್ ಅಧಿಕಾರಿಗಳಿಂದ 2615.49 ಲೀಟರ್ (ರೂ.776008 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 1.41 ಲೀಟರ್ (ರೂ.640 ಮೌಲ್ಯ) ಮದ್ಯ ವಶಪಡಿಸಿಕೊಳ್ಳಲಾಗಿದೆ.

ಸಂಡೂರು ವಿಧಾನಸಭೆ ಉಪಚುನಾವಣೆಯ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಈಗಾಗಲೇ ವಿವಿಧ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಕಾರ್ಯಪ್ರವೃತ್ತವಾಗಿದೆ. 9 ಫ್ಲೈಯಿಂಗ್ ಸಾ?ಕ ?ಯ ?ವಡ್, 1 ಎಸ್ಎಸ್‌ಟಿ ತಂಡ ಮತ್ತು 4 ಅಬಕಾರಿ ತಂಡ ಕಾರ್ಯ ನಿರ್ವಹಿಸುತ್ತಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

### ಷರತ್ತಿಲ್ಲದೆ ಪಕ್ಷಕ್ಕೆ ಸೇರ್ಪಡೆ

● ವಾರ್ತಾಲೋಕ ವಾರ್ತೆ



**ಬೆಂಗಳೂರು :** ಮಾಜಿ ಸಚಿವ ಸಿ.ಪಿ ಯೋಗೇಶ್ವರ್ ಯಾವುದೇ ಷರತ್ತಿಲ್ಲದೆ ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾಗಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿಂದು ಸಿ.ಪಿ ಯೋಗೇಶ್ವರ್ ಅವರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಡಿ.ಕೆ ಶಿವಕುಮಾರ್ ಅವರು, ರಾಜಕೀಯದಲ್ಲಿ ಯಾವುದೂ ಅಸಾಧ್ಯವಲ್ಲ, ಏನೂ ಬೇಕಾದರು ಆಗಬಹುದು. ಇದು ಸಾಧ್ಯತೆಯ ಕಲೆ ಎಂದು ವ್ಯಾಖ್ಯಾನಿಸಿದರು. ಇಂದು ಬೆಳಿಗ್ಗೆ ಸಿ.ಪಿ ಯೋಗೇಶ್ವರ್ ಅವರು ನನ್ನ ಮನೆಗೆ ಬಂದು ಮಾತನಾಡಿ ಕಾಂಗ್ರೆಸ್ ಸೇರಲು ಬಯಸಿರುವುದಾಗಿ ಹೇಳಿದರು. ತಕ್ಷಣವೇ ನಾನು ವರಿಷ್ಠರನ್ನು ಸಂಪರ್ಕಿಸಿ ಮಾತನಾಡಿದೆ. ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಭೇಟಿ ಮಾಡಿ ಚರ್ಚಿಸಿ ವರಿಷ್ಠರ ಅನುಮತಿ ಪಡೆದು ಕಾಂಗ್ರೆಸ್‌ಗೆ ಸೇರ್ಪಡೆ ಮಾಡಿಕೊಂಡಿದ್ದೇವೆ. ಅವರು ಯಾವುದೇ ಷರತ್ತು ಹಾಕಿಲ್ಲ ಎಂದರು.

ಕಾಂಗ್ರೆಸ್ ಸೇರುವ ಮೂಲಕ ಯೋಗೇಶ್ವರ್ ಮರಳಿ ಗೂಡಿಗೆ ಬಂದಿದ್ದಾರೆ. ಯೋಗೇಶ್ವರ್ ರಾಜಕಾರಣ ಮಾಡಿದ್ದು ಕಾಂಗ್ರೆಸ್‌ನಿಂದಲೇ ಬೇರೆ ಬೇರೆ ಚಿಹ್ನೆಯಡಿ ಕೆಲಸ ಮಾಡಿ ಮತ್ತೆ ಕಾಂಗ್ರೆಸ್‌ಗೆ ಬಂದಿದ್ದಾರೆ ಎಂದರು.

## ಅನ್ನಪೂರ್ಣ ತುಕಾರಾಮ್ ಸಂಡೂರಿನಲ್ಲಿ ನಾಮಪತ್ರ ಸಲ್ಲಿಕೆ

● ವಾರ್ತಾಲೋಕ ವಾರ್ತೆ




**ಹೊಸಪೇಟೆ :** ಅ 24. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ.ಹೆಚ್. ಎನ್. ಮೊಹಮ್ಮದ್ ಇಮಾಮ್ ನಿಯಾಜಿ ಅವರು ಭೇಟಿ ಮಾಡಿ ಹೂ ಗುಚ್ಚ ನೀಡುವ ಮೂಲಕ ಅತ್ಯಂತ ಬಹು ಮತಗಳಿಂದ ಜಯಗಳಿಸಲಿ ಶುಭ ಕೋರಿದರು. ನಂತರ ಅತ್ಯಂತ ವಿಜೃಂಭಣೆಯಿಂದ ನಾಮ ಪತ್ರ ಸಲ್ಲಿಸಲು ಹಮ್ಮಿಕೊಂಡ ಸಾವಿರಾರೂ ಕಾಂಗ್ರೆಸ್ ಕಾರ್ಯಕರ್ತರು ಅಭಿಮಾನಿಗಳು ಬೃಹತ್ ಮೆರವಣಿಗೆ ನಡೆಸಿದರು. ಈ ಬೃಹತ್ ಕಾಂಗ್ರೇಸ್ ಪಕ್ಷದ ಮೆರವಣಿಗೆಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಉಸ್ತುವಾರಿ ಸಚಿವ ಬಿ. ಜೆಡ್ . ಜಮೀರ್ ಅಹಮದ್ ಖಾನ್ ರವರು ಹಾಗೂ ಕಾರ್ಮಿಕ ಇಲಾಖೆಯ ಸಚಿವರಾದ ಶ್ರೀ ಸಂತೋಷ್ ಲಾಡ್ ರವರು, ಸಂಸದರಾದ ಈ ತುಕಾರಾಮ್ ರವರು, ಶಾಸಕರಾದ ಹಾಗೂ ಮಾಜಿ ಸಚಿವರಾದ .ಬಿ.ನಾಗೇಂದ್ರ ಕೆ. ಎಂ. ಎಫ್ ಅಧ್ಯಕ್ಷರಾದ ಭೀಮ ನಾಯಕ್, ಶಾಸಕರಾದ ಎನ್.ಟಿ. ಶ್ರೀನಿವಾಸ ರವರು, ಜಿಲ್ಲಾಧ್ಯಕರಾಧ ಬಿ.ವಿ. ಶಿವಯೋಗಿ ರವರ ನೇತೃತ್ವದಲ್ಲಿ ಅಭ್ಯರ್ಥಿಯು ನಾಮಪತ್ರ ಸಲ್ಲಿಸಿದರು.

ಈ ಮೆರವಣಿಗೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು ಸಾವಿರಾರು ಕಾರ್ಯಕರ್ತರು ಅಭಿಮಾನಿಗಳು ಭಾಗವಹಿಸಿದ್ದರು.



## ಶ್ರೀ ಗುರು ಕನಕ ಶಾಲೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ



● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ : ಅ 24.** ಸಮೀಪದ ತಾಯಕನಹಳ್ಳಿ ಗ್ರಾಮದ ಶ್ರೀ ಗುರು ಕನಕ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು ಆಚರಿಸಲಾಯಿತು ಕಾರ್ಯ ಕ್ರಮದಲ್ಲಿ ಸುನೀತಾ ಗುರುರಾಜ್ ಕಿತ್ತೂರು ರಾಣಿ ಚೆನ್ನಮ್ಮ ಇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಕ್ಕಳಿಗೆ ನಾಡಿನ ವೀರ ವನಿತೆ ಕಿತ್ತೂರು ರಾಣಿ ಅವರ ಬಗ್ಗೆ ಮಾಹಿತಿ ನೀಡಿದರು ಕರ್ನಾಟಕ ಸ್ವಾತಂತ್ರ್ಯ ಹೋರಾಟದಲ್ಲಿ ವ್ ೨ ೨ ೦ ಚ್ ೧ ಣ ಿ ೦ ೨ ್ ೨ ಲ್ಲಿ ಕಾಣಿಸಿಕೊಂಡ ಪ್ರಥಮ ಮಹಿಳಾ ಹೋರಾಟಗಾರ್ತಿ ಆಗಿದ್ದರು ಇವರು ಬ್ರಿಟಿಷರ ವಿರುದ್ಧ ಸಿಂಹಿಣಿಯಂತೆ ಹೋರಾಡಿ ಸ್ವಾತಂತ್ರ್ಯ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಇವರು ನಮ್ಮ ನಾಡಿನ ಹೆಣ್ಣು ಮಕ್ಕಳಿಗೆ ಸ್ಪೂರ್ತಿದಾಯಕ ರಾಗಿದ್ದಾರೆ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಸಹ ಶಿಕ್ಷಕರಾದ ಸುಮಿತ್ರ ಸಿ ಆರ್ ಮಂಜುಳಾ ಎಂ ಪ್ರಭಾಕರ್ ಎಂ ಬಸವರಾಜ್ ಜಿ ಪಿ ಸರೋಜ ಆರ್ ರುದ್ರಮ್ಮ ಸಿ ಕುಬೇರ ಎಂ ಜೆ ಹಾಗೂ ಪುಟಾಣಿ ಮಕ್ಕಳು ಭಾಗವಹಿಸಿದ್ದರು. ಪುಟಾಣಿ ಮಕ್ಕಳು ಕಿತ್ತೂರು ರಾಣಿ ಚೆನ್ನಮ್ಮ ಇವರ ಕುರಿತು ಪುಟ್ಟದಾಗಿ ಮಾತನಾಡಿದರು ಸಿಹಿ ಹಂಚುವ ಮೂಲಕ ಕಾರ್ಯಕ್ರಮ ಮುಕ್ತಾಯ ಮಾಡಲಾಯಿತು.

ವರದಿ ಎಚ್ ವೀರಣ್ಣ.

## ವಾಲ್ಮೀಕಿ ನಿಗಮದ ಹಣ ಲೂಟಿಕೋರರಿಗೆ ಪಾಠ ಕಲಿಸಿ; ರಘು ಕೌಟಿಲ್ಯ

● ವಾರ್ತಾಲೋಕ ವಾರ್ತೆ



**ಸಂಡೂರ್ :** ಅ 24. ಸಂಡೂರು ವಿಧಾನಸಭಾ ಉಪಚುನಾವಣೆ ಇಡೀ ದೇಶದ ಗಮನವನ್ನು ಸೆಳೆದಿದೆ. ಕಾರಣ ಅತ್ಯಂತ ಪ್ರತಿಷ್ಠೆಯ ಕಣವಾಗಿದ್ದು ಗೆಲ್ಲುವ ವಿಶ್ವಾಸ ಹೊಂದಿದ್ದೇವೆ, ಮತದಾರ ಪ್ರಭುಗಳು ಸ್ವಾಭಿಮಾನದ ಮತ ಹಾಕಬೇಕು, ಕಾರಣ ವಾಲ್ಮೀಕಿ ನಿಗಮದ ಹಣ ಲೂಟಿಕಾರರಿಗೆ ಜನತಾ ನ್ಯಾಯಾಲಯದಲ್ಲಿ ಶಿಕ್ಷೆ ನಿಡಬೇಕು ಎಂದು ಕರ್ನಾಟಕ ರಾಜ್ಯ ಬಿ.ಜೆ.ಪಿ ಕಾರ್ಯದರ್ಶಿ ರಘುಕೌಟಿಲ್ಯ ತಿಳಿಸಿದರು.

ಅವರು ಪಟ್ಟಣದ ಬಿಜೆಪಿ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ ರಾಜ್ಯ ಕಾಂಗ್ರೇಸ್ ಹಗರಣಗಳ ಸುಳಿಯಲ್ಲಿ ಸಿಲುಕಿದೆ, ಒಂದಾದ ನಂತರ ಒಂದರಂತೆ ಹಗರಣಗಳಲ್ಲಿ ಮುಳುಗಿದೆ. ಪ.ಪಂ. ಮೀಸಲು ಕ್ಷೇತ್ರವಾದ ಸಂಡೂರು ಪ.ಪಂ. ವಾಲ್ಮೀಕಿ ನಿಗಮದ ಹಣವನ್ನು ಲೋಕಸಭಾ ಚುನಾವಣೆಯಲ್ಲಿ ಬಳಕೆ ಮಾಡಿ ವಾಲ್ಮೀಕಿ ಸಮಾಜದ ಜನತೆ ಅಗಿರುವ ಮೋಸವನ್ನು ಜನತಾ ನ್ಯಾಯಾಲಯದಲ್ಲಿ ಸ್ವಾಭಿಮಾನದ ಮತ ಹಾಕುವ ಮೂಲಕ ನ್ಯಾಯ ನೀಡಬೇಕು. ಬಿಜೆಪಿ ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತು ವಾಲ್ಮೀಕಿ ಸಮಾಜದ ಯುವ ನಾಯಕನಾಗಿದ್ದು. ಅತನನ್ನು ಗೆಲ್ಲಿಸುವ ಮೂಲಕ ಪ್ರಗತಿಗೆ ನಾಂದಿಹಾಡಬೇಕು. ಕಾಂಗ್ರೇಸ್ ಪಕ್ಷ ಐದು ಗ್ಯಾರಂಟಿಗೆ ಹಣವಿಲ್ಲದೆ ಚುನಾವಣೆ ಬಂದಾಗ ಮಾತ್ರ ಹಣವನ್ನು ಹಾಕುತ್ತಿದ್ದಾರೆ, ಅದರೆ ಏಕೆ ಪ್ರತಿ ತಿಂಗಳು ಹಾಕುತ್ತಿಲ್ಲ, ಕಾರಣ ಅಧಿಕಾರಿಗಳ ತಪ್ಪೋ, ಅಥವಾ ಖಜಾನೆಯಲ್ಲಿ ಹಣವಿಲ್ಲವೋ, ಇಂದು ಕರ್ನಾಟಕ ಪ್ರಗತಿಯ ರಾಜ್ಯವಾಗಿತ್ತು ಈಗ ಹಿಂದಕ್ಕೆ ಹೋಗುತ್ತಿದೆ ಕಾರಣ ಎಲ್ಲಿಯೂ ಸಹ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಬರೀ ಗ್ಯಾರಂಟಿಗಳಿಗೆ ಹಣ ಜೋಡಿಸುವುದೇ ಅಗಿದೆ, ಈ ಹಿಂದೆ ನಾವು ಕಪ್ಪು ಹಣ, ಹವಾಲ ಇಂತಹ ಹಣ ಕೇಳಿದ್ದೇವು, ಅದರೆ ಸಿದ್ದರಾಮಯ್ಯನವರ ಸರ್ಕಾರ ಸರ್ಕಾರದ ಖಜಾನೆಗೆ ಖನ್ನಾ ಹಾಕಿ ನೇರವಾಗಿ ವಾಲ್ಮೀಕಿ ಹಗರಣದ ಹಣವನ್ನು ಲೂಟಿ ಮಾಡಿದೆ ಎಂದು ಅರೋಪಿಸಿದರು. ಸಿದ್ದರಾಮಯ್ಯನವರು ಟೆಂಪಲ್ ರನ್ ಪ್ರಾರಂಭಿಸಿದ್ದಾರೆ, ಅಭಿವೃದ್ಧಿ ಶೂನ್ಯವಾಗಿದೆ ಎಂದು ಅರೋಪಿಸಿ ಬಿಜೆಪಿ ಗೆಲ್ಲಿಸಿ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ಸೋಮಶೇಖರ, ರಾಜ್ಯ ಕಾರ್ಯದರ್ಶಿಗಳಾದ ಅಯ್ಯಳಿ ತಿಮ್ಮಪ್ಪ, ರಾಜ್ಯ ಕಾರ್ಯಕಾರಿಣಿ ಸದಸ್ಯ ಸಿಂಧನೂರು ವೆಂಕಟೇಶ್, ತಾಲೂಕು ಅಧ್ಯಕ್ಷ ನಾನಾ ಸಾಹೇಬ್ ನಿಕ್ಕಂ, ಮಹಿಳಾ ಪ್ರತಿನಿಧಿ ಆಶ್ವಿನಿ, ಹೊಸಪೇಟೆ ಅಧ್ಯಕ್ಷ ಲಿಂಗಪ್ಪ, ಅರ್.ಟಿ. ರಘು, ದರೋಜಿ ರಮೇಶ್, ರಾಜೇಂದ್ರ ಯಾದವ ಇತರರು ಉಪಸ್ಥಿತರಿದ್ದರು.

## ಎ.ಐ.ಡಿ.ಆರ.ಎಂ.ತಾಲೂಕು ಸಮಿತಿ ಸಭೆ




● ವಾರ್ತಾಲೋಕ ವಾರ್ತೆ

**ಹಡಗಲಿ :** ಅ24. ಹೂವಿನಹಡಗಲಿ.ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ ತಾಲೂಕು ಮಂಡಳಿ ಹೂವಿನಹಡಗಲಿ ವತಿಯಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಡಗಲಿ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ಹಾಗೂ ಸರ್ಕಾರಿ ಇಲಾಖೆಗಳಲ್ಲಿ ಸಾರ್ವಜನಿಕರ ಕೆಲಸ ವಿಳಂಬ ನೀತಿ.ಹಾಗೂ ಗ್ರಾಮ ಪಂಚಾಯಿತಿ ಹಳ್ಳಿ ತಾಂಡಾಗಳಲ್ಲಿ ಸಾರ್ವಜನಿಕರಿಗೆ ನಿವೇಶನ. ರಹಿತರಿಗೆ ನಿವೇಶನ .ವಸತಿ ವಸತಿ ರಹಿತರಿಗೆ ವಸತಿ. ನಿಡಲು ಸರ್ಕಾರ ಹಿಂದೇಟು ಹಾಕುತ್ತಿದ್ದು. ಕೆಲವು ಹಳ್ಳಿಗಳಲ್ಲಿ ದಲಿತರಿಗೆ ಸ್ಮಶಾನ ಭೂಮಿ ಇಲ್ಲಾ.ಇತರೆ ವಿಷಯಗಳ ಕುರಿತು.ಹಾಗೂ ದಿನಾಂಕ 28.10.2024ರಂದು ಹೂವಿನಹಡಗಲಿ ತಾಲೂಕಿನಲ್ಲಿ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ ತಾಲೂಕು ಮಂಡಳಿ ವತಿಯಿಂದ ತಾಲೂಕು ಪ್ರಥಮ ಸಮ್ಮೇಳನದಲ್ಲಿ ಸರ್ಕಾರಕ್ಕೆ ಒತ್ತಾಯಿಸಿ ಸಭೆ ತೀರ್ಮಾನಿಸಿತು ಸಭೆಯಲ್ಲಿ ವಿವಿಧ ಪ್ರಗತಿಪರ ಮುಖಂಡರಾದ. ಕೆ.ಉಚ್ಚೆಂಗೆಪ್ಪ.ಪಿ.ನಿಂಗಪ್ಪ. ಚಲುವಾದಿ ಮಹಾ ಸಭಾ ಸಂಘಟನೆಯ ಹೊನ್ನಪ್ಪ ಚಲುವಾದಿ.ಹಾಲೇಶ ಚಲುವಾದಿ. ಯಲ್ಲಪ್ಪ.ನಿವೃತ್ತ ಶಿಕ್ಷಕರಾದ ದೇವೇಂದ್ರಪ್ಪ.ನಾಗರಾಜ.ಭರಮಪ್ಪ.ತುಂಬಪ್ಪ.ಶಿವಪುತ್ರ.ಹಾಗೂ ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ ರಾಜ್ಯ ಸಂಚಾಲಕ ಹಲಗಿ ಸುರೇಶ ಇತರರು ಭಾಗವಹಿಸಿದ್ದರು.

ವರದಿ ಸುರೇಶ್ ಹಲಗಿ

## ಕನ್ನಡ ಜ್ಯೋತಿ ಹೊತ್ತ "ಕನ್ನಡ ರಥ"ಕ್ಕೆ ಕೊಟ್ಟೂರಿನಲ್ಲಿ ಅದ್ದೂರಿ ಸ್ವಾಗತ

● ವಾರ್ತಾಲೋಕ ವಾರ್ತೆ






**ಕೊಟ್ಟೂರು :** ಅ 24. ಮಂಡ್ಯದಲ್ಲಿ 87ನೇ ಕನ್ನಡ ಸಾಹಿತ್ಯ ಸಮ್ಮೇಳನವು ಮಂಡದಲ್ಲಿ 2024ರ ಡಿಸೆಂಬರ್ 20,21 ಹಾಗೂ 22 ರಂದು ಜರುಗಲಿದ್ದು, ಸದರಿ ಸಮ್ಮೇಳನವು ವಿಶೇಷವಾಗಿ ಆಚರಿಸಲು ಕನ್ನಡದ ಜ್ಯೋತಿ ಹೊತ್ತ "ಕನ್ನಡ ರಥ" ವು ಕರ್ನಾಟಕದಾದ್ಯಂತ ಸಂಚರಿಸಲಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ಸಂಚರಿಸುವ ರಥವು ಕೂಡ್ಲಿಗಿ ತಾಲೂಕಿನಿಂದ ದಿನಾಂಕ: 23.10.2024 ರಂದು ಬೆಳಿಗ್ಗೆ ಕೊಟ್ಟೂರಿಗೆ ಆಗಮಿಸಿದ್ದು, ಅಮರೇಶ್ ಜಿ ಕೆ ತಹಶೀಲ್ದಾರರು ಕೊಟ್ಟೂರು ತಾಲೂಕಿಗೆ ಗೌರವ ಪೂರ್ವಕವಾಗಿ ಸ್ವಾಗತಿಸಿಕೊಂಡರು. ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿಯ ಕ್ರಿಯಾಮೂರ್ತಿಗಳಾದ ಆರ್ ಎಂ ಪ್ರಕಾಶ್ ಸ್ವಾಮಿಗಳು ಪೂಜೆ ನೆರವೇರಿಸಿದರೆ ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಬಿ ರೇಖಾ ರಮೇಶ್ ಇವರು ತಾಯಿ ಭುವನೇಶ್ವರಿಗೆ ಮಾಲಾರ್ಪಣೆ ಮಾಡುವ ಮೂಲಕ ರಥಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪಟ್ಟಣ ಉಪಾಧ್ಯಕ್ಷರಾದ ಸಿದ್ದಯ್ಯ, ಸದಸ್ಯರಾದ ಬಿ ರಾಮಣ್ಣ, ಕೆಂಗರಾಜ, ಕೊಟ್ರೇಶ್, ವೀಣಾ ವಿವೇಕಾನಂದ ಹಾಗೂ ಇತರರು, ಹೆಚ್ ವಿಜಯಕುಮಾರ್ ಎಡಿ ನರೇಗಾ, ನಿಂಗಪ್ಪ ಇಸಿಓ, ಬದ್ದಿಮರಿಸ್ವಾಮಿ ಜಿಲ್ಲಾ ಡಿಎಸ್ಎಸ್ ಮುಖಂಡರು, ದೇವರಮನಿ ಕೊಟ್ರೇಶ ಅಧ್ಯಕ್ಷರು ಕೊಟ್ಟೂರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಹಾಗೂ ಸದಸ್ಯರು, ಈರಣ್ಣ ಕಾರ್ಯದರ್ಶಿ ಎಪಿಎಂಸಿ , ವಿವಿಧ ಶಾಲಾ ಶಿಕ್ಷಕರು ಭಾಗವಹಿಸಿದ್ದರು.

ಶ್ರೀ ಗುರು ಕೊಟ್ಟೂರೇಶ್ವರ ಮಹಾದ್ವಾರದಿಂದ ಹೊರಟ ರಥವು ಉಜ್ಜಿನಿ ರಸ್ತೆಯ ಮೂಲಕ ಸಾಗಿ ಬಸ್ನಿಲ್ದಾಣದ ಮುಖ್ಯರಸ್ತೆಯ ಮೂಲಕ ಹಡಗಲಿಗೆ ತೆರಳಿತು. ತಹಶೀಲ್ದಾರರು ಹಾಗೂ ತಾಲೂಕು ಪಂಚಾಯಿತಿಯ ವಿಜಯ ಕುಮಾರ್ ಇವರು ಕೊಟ್ಟೂರಿನ ಗಡಿಭಾಗವಾದ ಅಲಬೂರು ಗ್ರಾಮದವರೆಗೆ ಹೋಗಿ ಹಡಗಲಿಗೆ ಬೀಳ್ಕೊಟ್ಟರು. ಅಲಬೂರು ಗ್ರಾಮದಲ್ಲಿ ಗ್ರಾ ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಗ್ರಾಮದ ಮುಖಂಡರು ಭಾಗವಹಿಸಿ ಪೂಜೆ ಮಾಡಿ ಗೌರವ ಸಲ್ಲಿಸಿದರು. ಕಂದಾಯ ನಿರೀಕ್ಷಕರಾದ ಎಸ್ ಎಂ ಹಾಲಸ್ವಾಮಿ, ಡಿ ಶಿವಕುಮಾರ್, ಗ್ರಾಮ ಆಡಳಿತ ಅಧಿಕಾರಿ ಹರೀಶ್, ಮಂಗಳ ಮುದೇನೂರು, ಶಾರದಮ್ಮ ಇದ್ದರು. ಮಾರ್ಗಮಧ್ಯದಲ್ಲಿ ಆಗಮಿಸಿದ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ನೇಮಿರಾಜನಾಯ್ಕರವರು ಗೌರವ ಸಲ್ಲಿಸಿದರು.

ವರದಿ ಪರಶುರಾಮ್.

# ಕನ್ನಡ ತೇರು ಕರ್ನಾಟಕದ ಕನ್ನಡಿಗರ ತೇರು ನೆಲ ಜಲ ಸಂಸ್ಕೃತಿ ಒಳಗೊಂಡಿದೆ ಎನ್ ಟಿ ಶ್ರೀನಿವಾಸ್

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ24**. ಕನ್ನಡ ಕೇವಲ ಭಾಷೆಯಲ್ಲ, ತನ್ನದೇ ಆದ ನೆಲ, ಜಲ, ಸಂಸ್ಕೃತಿಯ ಹಿರಿಮೆಯನ್ನು ಒಳಗೊಂಡಿದೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು. ಪಟ್ಟಣದ ಮದಕರಿ ವೃತ್ತದಲ್ಲಿ ಮಂಗಳವಾರ ರಾತ್ರಿ ಮಂಡ್ಯದಲ್ಲಿ ನಡೆಯಲಿರುವ 87 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜ್ಯೋತಿರಥ ಯಾತ್ರೆಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಕನ್ನಡ ಭಾಷೆ ಅತ್ಯಂತ ಶ್ರೀಮಂತವಾಗಿದೆ. ಇಲ್ಲಿ ಅನೇಕ ಸಾಹಿತಿಗಳು ಸಾಹಿತ್ಯ ರಚನೆ ಮಾಡಿ ಕನ್ನಡ ಭಾಷೆಯನ್ನು ಜಗತ್ತಿನ ಇತರೆ ರಾಷ್ಟ್ರಗಳಿಗೆ ಪರಿಚಯಿಸಿದ್ದಾರೆ. ಈಗಾಗಲೇ 8 ಜ್ಞಾನಪೀಠ ಪ್ರಶಸ್ತಿ ಲಭಿಸಿರುವುದು, ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಅದರಂತೆ ಈ ನಾಡಿನ ಅನೇಕ ಅರಸರು ಸಹ ಸಾಹಿತ್ಯ, ಸಂಸ್ಕೃತಿಗೆ ಹಾಗೂ ಕಲೆಗೆ ಹೆಚ್ಚಿನ ಮನ್ನಣೆ ನೀಡಿದ್ದಾರೆ. ಅದನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸುವು ಕಾರ್ಯ ಮಾಡಬೇಕಿದೆ. ಕನ್ನಡ ಸಾಹಿತ್ಯ ಸಮ್ಮೇಳವು ಕನ್ನಡಿಗರ ಹೆಮ್ಮೆಯ ಪ್ರತೀಕವಾಗಬೇಕಿದೆ. ಆ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಕಾರಾತ್ಮಕವಾದ ಹೆಜ್ಜೆಯನ್ನು ಇಡುತ್ತಿದೆ. ಎಲ್ಲ ಕನ್ನಡಿಗರು ಮಂಡ್ಯದಲ್ಲಿ ನಡೆಯುವ ಕನ್ನಡದ ಅಕ್ಷರ ಜಾತ್ರೆಯಲ್ಲಿ ಭಾಗವಹಿಸುವ ಮೂಲಕ ಕನ್ನಡಾಭಿಮಾನವನ್ನು ಎತ್ತಿ ತೋರಿಸಬೇಕಿದೆ ಎಂದು ಹೇಳಿದರು. ಕಸಾಪ ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ ಮಾತನಾಡಿ, ಡಿ. 20 ರಿಂದ 22ರವರೆಗೆ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಜ್ಯೋತಿ ರಥವು 87 ದಿನಗಳ ಕಾಲ ರಾಜ್ಯದ 240 ತಾಲೂಕುಗಳಲ್ಲಿ ಸಂಚರಿಸಲಿದೆ. ಈ ರಥಯಾತ್ರೆಯ ಮೂಲಕ ಕನ್ನಡ ನಾಡು, ನುಡಿ, ಜಲ,
ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವ ಮತ್ತು ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ ಎಂದರು. ತಹಸೀಲ್ದಾರ್ ಎಂ. ರೇಣುಕಾ ಕನ್ನಡ ರಥಕ್ಕೆ ಪೂಜೆ ಸಲ್ಲಿಸಿ ಬರಮಾಡಿಕೊಂಡರು, ಕೂಡ್ಲಿಗಿ ಹಿರೇಮಠದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮಿಜೀ ನೇತೃತ್ವದಲ್ಲಿ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ನಾಗಮಣಿ ಜಿಂಕಾಲ್, ಕರವೇ ಅಧ್ಯಕ್ಷ ಕಾಟೇರ ಹಾಲೇಶ್, ಢಾಣಿ ರಾಘವೇಂದ್ರ, ಲಕ್ಷ್ಮಿದೇವಿ, ಬದ್ರಿ, ಶಿಕ್ಷಕ ಉಡುಚಪ್ಪ, ಕಸಾಪ ನಿಕಟಪೂರ್ವ ಅಧ್ಯಕ್ಷ ಎನ್.ಎಂ.ರವಿಕುಮಾರ್, ಕೆ.ಎಂ.ವೀರೇಶ್, ಕಸಾಪ ಹೊಸಹಳ್ಳಿ ಹೋಬಳಿ ಅಧ್ಯಕ್ಷ ಎಸ್. ತಿಪ್ಪೇಸ್ವಾಮಿ, ಗುಡೇಕೋಟೆ ಹೋಬಳಿ ಅಧ್ಯಕ್ಷ ಟಿ.ಎಚ್.ಎಂ.ಶೇಖರಯ್ಯ, ಸುಭಾಶ್ಚಂದ್ರ, ಎ.ಕರಿಬಸಪ್ಪ, ವೀರೇಶ್ ಇದ್ದರು.
ವರದಿ ಹೆಚ್ಚು ವೀರಣ್ಣ.

# ಬ್ರಿಟೀಷ್ ಸೈನಿಕರ ವಿರುದ್ದ ಕೆಚ್ಚೆಧೆಯಿಂದ ಹೋರಾಡಿದ ವೀರವನಿತೆ ರಾಣಿಚೆನ್ನಮ್ಮ- ನರಸಪ್ಪತಹಶೀಲ್ದಾರ್



**ಕುರುಗೋಡು.ಅ.** :ಬ್ರಿಟೀಷ್ ಸೈನಿಕ ವಿರುದ್ಧ ಎದೆಗುಂದದೆ ಕೆಚ್ಚೆದೆಯಿಂದ ಹೋರಾಡಿದ ವೀರವನಿತೆ ಕಿತ್ತೂರು ರಾಣಿಚೆನ್ನಮ್ಮ ಎಂದು ಕುರುಗೋಡು ತಹಶೀಲ್ದಾರ್ ನರಸಪ್ಪತಹಶೀಲ್ದಾರ್ ಅವರು ಹೇಳಿದರು. ಅವರು ಪಟ್ಟಣದ ತಹಶೀಲ್ದಾರ್ ಕಛೇರಿ ಸಭಾಂಗಣದಲ್ಲಿ ಕುರುಗೋಡು ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವೀರವನಿತೆ ರಾಣಿಚೆನ್ನಮ್ಮ ಅವರ ಜಯಂತಿಯ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ನಾಡಿನ ಕಿತ್ತೂರುರಾಣಿ ಚೆನ್ನಮ್ಮ ಅವರು ಕಿತ್ತೂರು ಸಂಸ್ಥಾನದಲ್ಲಿ ನಾಡಿನಜನತೆಗೆ ಬ್ರಿಟೀಷ್ ಸೈನಿಕರು ಬಹಳ ತೊಂದರೆಯೊಡ್ಡಿದ್ದ ಸಂದರ್ಭದಲ್ಲಿ ರಾಣಿಚೆನ್ನಮ್ಮಳು ತಮ್ಮ ಪ್ರಾಣವನ್ನೇ ಲೆಕ್ಕಿಸದೇ ಅವರ ವಿರುದ್ದ ಹೋರಾಡಿ ಸಾಹಸಮೆರೆದಿದ್ದರು. ಅಂಥಹ ವೀರವನಿತೆಯ ಆದರ್ಶ, ತತ್ವಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಅಭಿವೃದ್ಧಿಹೊಂದುವಂತೆ ಸಲಹೆ ನೀಡಿದರು. ಗ್ರೇಡ್2 ತಹಶೀಲ್ದಾರ್ ಮಲ್ಲೇಶಪ್ಪ ಅವರು ಮಾತನಾಡಿ, ಕಿತ್ತೂರುರಾಣಿ ಚೆನ್ನಮ್ಮ ಅವರ ಜೀವನಚರಿತ್ರೆ, ಹಾಗು ಹೋರಾಟವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕೆಂದು ನುಡಿದರು.
ತಹಶೀಲ್ದಾರ್‌ಕಛೇರಿಯ ಶಿರಸ್ತೆದಾರ್ ವಿಜಯಕುಮಾರ್, ಉಪ-ತಹಶೀಲ್ದಾರ್ ಎಸ್.ರಾಜಶೇಖರ್, ಕೋಳೂರು ಡಿಟಿ.ರವೀಂದ್ರಬಾಬು, ಮುಖಂಡ ಕೆಎಂ.ಉಮಾಪತಿಗೌಡ, ಮೃತ್ಯಂಜಯಯಾದವ್, ಹಂಪಿಬಸವರಾಜ, ನಟರಾಜಗೌಡ, ಕುಂಬಾರುದೊಡ್ಡಪ್ಪ, ಶೇಖರಪ್ಪ, ಬಸವನಗೌಡ, ಸೇರಿದಂತೆ ಇತರೆ ತಹಶೀಲ್ದಾರ್ ಕಛೇರಿಯ ಸಿಬ್ಬಂದಿವರ್ಗದವರು ಇದ್ದರು.

# ಕೊಟ್ಟೂರೇಶ್ವರ ಮಹಾ ವಿದ್ಯಾಲಯ ಕೊಟ್ಟೂರು. ದಿನಾಂಕ 23/ 10/ ಕಿತ್ತೂರ ರಾಣಿ ಚೆನ್ನಮ್ಮ ಅವರ ಜಯಂತಿಯನ್ನು ಆಚರಿಸಲಾಯಿತು

● ವಾರ್ತಾಲೋಕ ವಾರ್ತೆ



**ಕೊಟ್ಟೂರು :ಅ 24**. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರ ಡಾ. ಎಮ್. ರವಿಕುಮಾರ್ ಸರ್ ಮಾತನಾಡಿ ಕಿತ್ತೂರಾಣಿ ಚೆನ್ನಮ್ಮ ಭಾರತ ದೇಶದ ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದು ತಿಳಿಸಿದರು. ಬ್ರಿಟಿಷರ ವಿರುದ್ಧ ಕೆಚ್ಚೆದಿಂದ ಹೋರಾಡಿದ ದಿಟ್ಟ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ನಾಗಿದ್ದಾಳೆ. ಧಾರವಾಡದ ಕಲೆಕ್ಟರ್ ನಾಗಿದ್ದ ಥ್ಯಾಕರೆಯನ್ನು ಕೊಂದು ತನ್ನ ಸಂಸ್ಥಾನವನ್ನು ಉಳಿಸಿಕೊಂಡ ವೀರ ಮಹಿಳೆಯಾಗಿದ್ದಾಳೆ. ಅಂದಿನ ರಾಣಿ ಚೆನ್ನಮ್ಮನ ಹೋರಾಟ ಉಳಿದ ಸ್ವಾತಂತ್ರ್ಯ ಹೋರಾಟಗಾರರಿಗೂ ಪ್ರೇರಣೆಯಾಯಿತು. ತನ್ನ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನ ಮೂಲಕವಾಗಿ ಸುಧೀರ್ ಗ ಹೋರಾಟದ ಮೂಲಕ ಸ್ವತಂತ್ರ ಹೋರಾಟಕ್ಕೆ ಹೊಸ ಪ್ರೇರಣೆಯನ್ನು ನೀಡಿದ ಮಹಿಳೆಯಾಗಿದ್ದಾಳೆ. ರಾಣಿ ಚೆನ್ನಮ್ಮನ ಆದರ್ಶಗಳು ಇಂದಿಗೂ ಸಹ ಯುವ ಜನತೆಗೆ ಪ್ರೇರಣೆಯಾಗಿದ್ದು ಆಕೆಯ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕೆಂದು ಈ ಮೂಲಕ ತಿಳಿಸಿದರು. ಈ ಸಂದರ್ಭದಲ್ಲಿ ಬೋಧಕ ಬೋಧಕೇತರ ಸಿಬ್ಬಂದಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.
ವರದಿ ಪರಶುರಾಮ್.

# ಉದ್ಯೋಗ ಖಾತರಿ ನಡಿಗೆ, ಸಬಲತೆಯಡೆಗೆ ಅಭಿಯಾನಕ್ಕೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೀರನಗೌಡ ಚೆನ್ನವೀರನಗೌಡ್ರ ಚಾಲನೆ

● ವಾರ್ತಾಲೋಕ ವಾರ್ತೆ



**ಕೊಪ್ಪಳ :ಅ 24** ಕೊಪ್ಪಳ ಜಿಲ್ಲೆ ಕುಕನೂರ ತಾಲೂಕಿನ ತಳಕಲ್ ಗ್ರಾ.ಪಂ ವ್ಯಾಪ್ತಿಯ ತಳಕಲ್ ಗ್ರಾಮದಲ್ಲಿ ಇಂದು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ 2025-26 ನೇ ಸಾಲಿನ ಕಾರ್ಮಿಕ ಆಯವ್ಯಯ ತಯಾರಿಸಲು *"ಉದ್ಯೋಗ ಖಾತರಿ ನಡಿಗೆ ಸಬಲತೆಯಡೆಗೆ"* ಅಭಿಯಾನದಡಿ ಐಇಸಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.
ಈ ವೇಳೆ ಗ್ರಾಮದ *ಮನೆ-ಮನೆಗೆ ಭೇಟಿ ನೀಡಿ ಸಾರ್ವಜನಿಕರು ತಮ್ಮ ಫೋನಿನ ಮೂಲಕ ಸ್ಕ್ಯಾನ್ ಮಾಡಿ ಬೇಡಿಕೆ ಸಲ್ಲಿಸುವ ಬಗ್ಗೆ, ಪ್ರತಿ ದಿನಕ್ಕೆ 349 ರೂಪಾಯಿ ಕೂಲಿ, ಯೋಜನೆಯಡಿ ದೊರಕುವ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳ ಬಗ್ಗೆ ಹಾಗೂ ಯೋಜನೆಗಳ ಬಗ್ಗೆ ಮಾಹಿತಿ ತಿಳಿಸಲಾಯಿತು.
ನಂತರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯಲ್ಲಿ *ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ* ಸಲ್ಲಿಸಿದ ಬೇಡಿಕೆಗಳನ್ನು ಪರಿಶೀಲನೆ ಮಾಡಿ ಪಟ್ಟಿ ತಯಾರಿಸಲಿದ್ದು, ಎಲ್ಲರೂ ಭಾಗವಹಿಸುವಂತೆ ತಿಳಿಸಲಾಯಿತು.
ಗ್ರಾಮದ ಕಿರಾಣಿ ಅಂಗಡಿ, ಹಾಲಿನ ಕೇಂದ್ರ ಸೇರಿ ಇನ್ನಿತರ
ಸಾರ್ವಜನಿಕ ಸ್ಥಳಗಳಲ್ಲಿ ಬೇಡಿಕೆ ಸಲ್ಲಿಸಲು *ಕ್ಯೂ ಆರ್ ಕೋಡ್* ಪ್ರತಿ ಅಂಟಿಸಿ ಜಾಗೃತಿ ಮೂಡಿಸಲಾಯಿತು.
ಈ ವೇಳೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಜಹಿರಾ ಬೇಗಂ, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಾದ ಆದಿಬಸಯ್ಯ ಹಿರೇಮಠ, ತಾ.ಪಂ ಐಇಸಿ ಸಂಯೋಜಕ ಲಕ್ಷ್ಮಣ ಕೆರಳ್ಳಿ , ಗ್ರಾ.ಪಂ ಗಣಕಯಂತ್ರ ನಿರ್ವಾಹಕರು, ಗ್ರಾ.ಪಂ ಇನ್ನಿತರ ಸಿಬ್ಬಂದಿಗಳು, ಸಾರ್ವಜನಿಕರು ಹಾಗೂ ಉಪಸ್ಥಿತರಿದ್ದರು.
ವರದಿ ಮಂಗಳೇಶ ಎಸ್ ಮಂಗಳೂರು

# ಇಂದು ಶಾಸಕ ಭರತ್ ರೆಡ್ಡಿ ಹುಟ್ಟುಹಬ್ಬ ಅಭಿಮಾನಿಗಳಿಂದ 135 ಅಡಿ ಕಟೌಟ್ ನಿರ್ಮಾಣ

● ವಾರ್ತಾಲೋಕ ವಾರ್ತೆ



**ಬಳ್ಳಾರಿ ಅ 24** :ಇಂದು ನಗರ ಶಾಸಕ ಭರತ್ ರೆಡ್ಡಿ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ನಗರದಾದ್ಯಂತ ಸುಮಾರು 11 ಕಡೆಯಲ್ಲಿ ಹುಟ್ಟುಹಬ್ಬ ಆಚರಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.
ನಗರದಾದ್ಯಂತ ಎಲ್ಲಾ ಪ್ರದೇಶದಗಳಲ್ಲಿ ಹುಟ್ಟುಹಬ್ಬದ ಪ್ರಯುಕ್ತ ಅನ್ನದಾನ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕರ ಆಪ್ತ ಹಾಗೂ ಪಾಲಿಕೆ ಸದಸ್ಯರಾದ ಮಿಂಚು ಶ್ರೀನಿವಾಸ್ ತಿಳಿಸಿದ್ದಾರೆ. ಈಗಾಗಲೇ ನಗರದ ತುಂಬೆಲ್ಲ ಶಾಸಕ ಭರತ್ ರೆಡ್ಡಿ ಅವರ ಬ್ಯಾನರ್ ಮತ್ತು ಕಟೌಟ್ಗಳನ್ನು ಅಳವಡಿಸಿ ಸಿಂಗರಿಸಿದ್ದಾರೆ. ಸಂಗಮ್ ಸರ್ಕಲ್ ನಲ್ಲಿ ವೃತ್ತದ ಸುತ್ತಲೂ ಒಂದು ಇಂಚು ಜಾಗವನ್ನು ಬಿಡದೆ ಶಾಸಕರ ಕಟೌಟ್ ಗಳನ್ನು ಅಳವಡಿಸಿದ್ದಾರೆ. ಮೋತಿ ಸರ್ಕಲ್ ನಲ್ಲಿ ಬುಡ ಕಚೇರಿಯ ಗೇಟ್ ಹತ್ತಿರ ಪ್ರಪ್ರಥಮ ಬಾರಿಗೆ ಇತಿಹಾಸ ಎಂಬಂತೆ ಸುಮಾರು 135 ಅಡಿಗಳ ಭಾರಿ ಕಟೌಟ್ ಅಳವಡಿಸಲಾಗಿದೆ . ಇದಕ್ಕಾಗಿ ಕಳೆದ ಒಂದು ವಾರದಿಂದ ಬೆಂಗಳೂರಿನ ಇವೆಂಟ್ ಕಂಪನಿಯೊಂದು ಪೂರ್ವ ತಯಾರಿಯನ್ನು ಮಾಡಿಕೊಂಡು ಕಬ್ಬಿಣದ ಸರಳಗಳೊಂದಿಗೆ ಪ್ರೇಮ್ ನಿರ್ಮಿಸಿ ಕಟೌಟ್ ಅಳವಡಿಸಿದ್ದಾರೆ.
ಈಗಾಗಲೇ ಶಾಸಕರ ಕಚೇರಿಯಲ್ಲಿ ಅವರ ಅಭಿಮಾನಿಗಳು ಅವರ ಹುಟ್ಟುಹಬ್ಬವನ್ನು ಹಬ್ಬದ ರೀತಿಯಲ್ಲಿ ಆಚರಿಸಲು ಸಜ್ಜಾಗಿದ್ದಾರೆ. ಇದರಿಂದ ಕಚೇರಿ ಮತ್ತು ಅದರ ಸುತ್ತಮುತ್ತಲಿನ ವಾತಾವರಣ ವಿವಿಧ ರೀತಿಯ ಕಟೌಟ್ ಮತ್ತು ಬ್ಯಾನರ್ಗಳೊಂದಿಗೆ ವಿಶೇಷವಾದ ಹಬ್ಬದ ರೀತಿಯ ವಾತಾವರಣ ಸೃಷ್ಟಿಸಿದ್ದಾರೆ ಇದೆಲ್ಲವನ್ನು ಗಮನಿಸಿದರೆ ಶಾಸಕ ಭರತ್ ರೆಡ್ಡಿ ಅವರ ಜನಪ್ರಿಯತೆ ಸಾಕ್ಷಿಯಾಗಿದೆ ಎಂದು ಬಳ್ಳಾರಿ ಮಹಾನಗರ ಪಾಲಿಕೆ ಸದಸ್ಯರಾದ ಮಿಂಚು ಶ್ರೀನಿವಾಸ್ ಅಭಿಪ್ರಾಯಪಟ್ಟರು.

# ಗೋವುಗಳು ರೈತರ ಜೀವನಾಡಿ: ಅವುಗಳ ರಕ್ಷಣೆ ನಮ್ಮೆಲ್ಲರ ಹೊಣೆ ಲಸಿಕೆ ಹಾಕಿಸಿ ರಕ್ಷಿಸಿ ತಹಶಿಲ್ದಾರ್ ಪ್ರತಿಭಾ ಆರ್ ಕಾಪು ತಾಲ್ಲೂಕಿನಲ್ಲಿ ಕಾಲುಬಾಯಿ ರೋಗ ಲಸಿಕಾ ಆಭಿಯಾನಕ್ಕೆ ಚಾಲನೆ

● ವಾರ್ತಾಲೋಕ ವಾರ್ತೆ



**ಅಕ್ಟೋಬರ್ 24** ಗೋವುಗಳು ರೈತರ ಜೀವನಾಡಿಯಾಗಿದ್ದು ಅವುಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಇತ್ತೀಚೆಗೆ ಹೆಚ್ಚಾಗುತ್ತಿರುವ ಕಾಲು ಬಾಯಿ ರೋಗವನ್ನು ತಡೆಗಟ್ಟಲು ಎಲ್ಲಾ ಗೋವುಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು ಎಂದು ಕಾಪು ತಹಶಿಲ್ದಾರ್ ಪ್ರತಿಭಾ ಆರ್ ತಿಳಿಸಿದರು.
ಇಂದು ಕಾಪುವಿನ ಲಕ್ಷ್ಮಿ ಜನಾರ್ಧನ ಸ್ವಾಮಿ ದೇವಸ್ಥಾನದ ಗೋಶಾಲೆಯಲ್ಲಿ ಕಾಲು ಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ತಹಶಿಲ್ದಾರ್ ಪ್ರತಿಭಾ ರವರು ಮಾತನಾಡಿ ಈ ಅಭಿಯಾನ ಇಡೀ ತಾಲ್ಲೂಕಿನಲ್ಲಿ ಒಂದು ತಿಂಗಳವರೆಗೆ ನಡೆಯಲಿದ್ದು, (21-10-24 ರಿಂದ 20-10-24 ರವರೆಗೆ)
ಯಾವ ಜಾನುವಾರುಗಳೂ ಹೊರತಾಗದಂತೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕೆಂದು ಪಶು ವೈದ್ಯಕೀಯ ಇಲಾಖೆಯ ವೈದ್ಯರಿಗೆ ಸೂಚನೆ ನೀಡಿದರು.
ಕಾಪುವಿನ ಗೋಶಾಲೆಯಲ್ಲಿ ಗೋವಿಗೆ ಮಾಲೆ ಹಾಕಿ, ಕುಂಕುಮ ಹಚ್ಚಿ, ಆರತಿ ಬೆಳಗಿ ಪೂಜಿಸಿ ನಂತರ ಆಹಾರ ನೀಡಿ ನಂತರ ಲಸಿಕೆ ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾಲು ಬಾಯಿ ರೋಗ ತೀವ್ರತರವಾದ ರೋಗವಾಗಿದ್ದು ಈ ರೋಗ ಬಂದ ಜಾನುವಾರುಗಳು ನಿತ್ರಾಣಗೊಳ್ಳುತ್ತವೆ.ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಕೃಷಿ ಕೆಲಸ ಸಾಧ್ಯವಾಗುವುದಿಲ್ಲ. ಗರ್ಭ ಧರಿಸುವುದಿಲ್ಲ. ಗರ್ಭ ಧರಿಸಿದರೂ ಗರ್ಭಪಾತ ಆಗುವ ಸಂಭವ ಇರುತ್ತದೆ. ಹೀಗಿರುವಾಗ ಈ ರೋಗ ಬರದಂತೆ ಲಸಿಕೆ ಹಾಕಿಸಬೇಕು. ಆಗ ಕೃಷಿ ಕೆಲಸವೂ ನಿರಾತಂಕವಾಗಿ ಸಾಗುತ್ತದೆ. ಹಾಲಿನ ಉತ್ಪಾದನೆಗೂ ಧಕ್ಕೆ ಇರುವುದಿಲ್ಲ.
ನಮ್ಮ ಕೃಷಿ ಕೆಲಸದಲ್ಲಿ ಅವಿಭಾಜ್ಯ ಅಂಗವಾಗಿರುವ ಜಾನುವಾರುಗಳ ಆರೋಗ್ಯ ನಿಗಾವಹಿಸಬೇಕು ಎಂದು ತಿಳಿಸಿದರು.
ಪಶು ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್ ಕಾರ್ಯಕ್ರಮ ಸಮನ್ವಯಗೊಳಿಸಿದರು.
ಗೋಶಾಲೆಯ ಮುಖ್ಯಸ್ಥರಾದ ರೋಹಿ ಕಿಣಿ, ಪಶು ವೈದ್ಯಾಧಿಕಾರಿಗಳಾದ ಪ್ರಶಾಂತ್ ವಿಜಯಕುಮಾರ್ ಹಾಗೂ ಪಶು ಸಖಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.
ವರದಿ ಡಾ.ನಂದುಪೂಜಾರಿ

# ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸಿ



**ಗದಗ** : ಜಿಲ್ಲೆಯಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ
ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ತಿಳಿಸಿದರು.
ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಅಚರಣೆಯ ಕು-ರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಯಾವುದೇ ಲೋಪಗಳಿಲ್ಲದಂತೆ ಆಚರಿಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಸಮಿತಿಯವರು ವಿಶೇಷ ಆಸಕ್ತಿಯಿಂದ ಕೆಲಸ ನಿರ್ವಹಿಸಬೇಕೆಂದು ಸೂಚಿಸಿದರು.
ಪ್ರತಿ ವರ್ಷದಂತೆ ಈ ವರ್ಷವೂ ಸಹ ಕನ್ನಡ ರಾಜ್ಯೋತ್ಸವದ ದಿನದ ಹಿಂದಿನ ದಿನ ಹಾಗೂ ಕನ್ನಡ ರಾಜ್ಯೋತ್ಸವದ ದಿನ ಎರಡು ದಿನ ಸರ್ಕಾರಿ ಕಚೇರಿ ಹಾಗೂ ನಗರದ ವಿವಿಧ ವೃತ್ತಗಳಲ್ಲಿ ಸ್ವಚ್ಛತೆಯೊಂದಿಗೆ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.
ಅಂದು ಬೆಳಿಗ್ಗೆ 7.30 ಗಂಟೆಗೆ ಗದಗ ಬೆಟಗೇರಿ ನಗರಸಭೆ ಪದವಿ ಪೂರ್ವ ಕಾಲೇಜ ಆವರಣದಿಂದ ತಾಯಿ ಭುವನೇಶ್ವರಿಯ ಮೆರವಣಿಗೆಯು ವಿವಿಧ ವೃತ್ತಗಳಲ್ಲಿ ಸಂಚರಿಸಿ ನಂತರ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ತಲುಪಲಿದೆ. ಬೆ.9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ನೆರವೇ-ರಿಸುವರು. ಕಾರ್ಯಕ್ರಮಕ್ಕೆ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕಾಗುತ್ತದೆ. ನಂತರ ಪೊಲೀಸ್ ಪಡೆ, ಹೋಮಗಾರ್ಡ, ಭಾರತ ಸೇವಾ ದಳಗಳಿಂದ ಪರೇಡ್, ಪಥ ಸಂಚಲನ ಜರುಗಲಿವೆ. ಕಾರ್ಯಕ್ರಮದ ಸ್ಥಳದ ಸ್ವಚ್ಛತೆ ಹಾಗೂ ಅತಿಥಿಗಳಿಗೆ ಆಸನದ ವ್ಯವಸ್ಥೆ , ಅಲ್ಪೋಪಹಾರದ ವ್ಯವಸ್ಥೆ ಕುರಿತು ಕ್ರಮ ಕೈಗೊಳ್ಳಬೇಕು. ಶಿಷ್ಟಾಚಾರದನ್ವಯ ಅತಿಥಿ ಗಣ್ಯರ ಅಹ್ವಾನ ಹಾಗೂ ಆಮಂತ್ರಣ ಪತ್ರಿಕೆ ಮುದ್ರಣಕ್ಕೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.
ವಿವಿಧ ರಂಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪರಿಣಿತರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಪಂಚಾಯತ್‌ದ ಯೋಜನಾಧಿಕಾರಿ ನಿರ್ಮಲಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟ್ಟೂರ, ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ಮಹೇಶ ಪೊ?ತದಾರ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಯುವಜನ ಮತ್ತು ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಎಲ್. ಬಾರಾಟಕ್ಕೆ, ಲೋಕೋಪಯೋಗಿ ಇಲಾಖೆ ಅಧಿಕಾರಿ ಪಾಟೀಲ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ದಲಿತರ ಮೇಲನ ದೌರ್ಜನ್ಯಗಳ ತ್ವರಿತ ನ್ಯಾಯಕ್ಕಾಗಿ ವಿಶೇಷ ಪೋಲೀಸ್ ಠಾಣೆಗಳನ್ನು ತೆರೆಯಿರಿ : ಡಿಎಸ್ಎಸ್ ಒತ್ತಾಯ

● ವಾರ್ತಾಲೋಕ ವಾರ್ತೆ



**ಬಳ್ಳಾರಿ ಅ 24** ದಲಿತರ ಮೇಲಿನ ದೌರ್ಜನ್ಯ ನಿಯಂತ್ರಣ ಮತ್ತು ತ್ವರಿತ ತನಿಖೆ ಹಾಗೂ ನ್ಯಾಯಕ್ಕಾಗಿ ಜಿಲ್ಲೆಗೊಂದು ಪೊಲೀಸ್ ಠಾಣೆ ತೆರೆಯಲು ಕ್ರಮ ಕೈಗೊಳ್ಳಬೇಕೆಂದು ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಸಂಘಟನೆಯಿಂದ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.
ಸಂಘಟನೆಯ ಪದಾಧಿಕಾರಿಗಳು ಇಂದು ಬಳ್ಳಾರಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ, ಅಕ್ಟೋಬರ್
28ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ದಲಿತರ ಮೇಲಿನ ಪ್ರಕರಣಗಳ ದಾಖಲೆ ಮತ್ತು ವಿಚಾರಣೆಗಾಗಿ ಪ್ರತ್ಯೇಕವಾಗಿ ಪೋಲಿಸ್ ಠಾಣೆಯನ್ನು ತೆರೆಯಲು ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಪತ್ರವನ್ನು ಸಲ್ಲಿಸಿ ಒತ್ತಾಯಿಸಿದರು.
ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಸಂಚಾಲಕರಾದ ಚಿಕ್ಕ ಗಾದಿಲಿಂಗಪ್ಪ, ಎಚ್ ಹುಸೇನಪ್ಪ, ದುರ್ಗಪ್ಪ ತಳವಾರ್, ಏಕೆ ಗಂಗಾಧರ, ಎಂ ರಾಜೇಶ್ವರಿ, ಈರಪ್ಪ, ಲಾಲಪ್ಪ, ಸಂಗನಕಲ್ಲು ನೆಟ್ಟೆಪ್ಪ, ಕರ್ಚೆಡ್ ಪ್ರಕಾಶ್, ರಮೇಶ್, ಹಂಪಣ್ಣ, ಶಿವಪ್ಪ, ವಕೀಲರಾದ ಕೆಕೆಹಾಳ ಹನುಮಂತಪ್ಪ, ಗಂಗಪ್ಪ, ಗಾದಿಲಿಂಗಪ್ಪ, ದುರ್ಗೇಶ್, ಆಂಜನೇಯ, ಸಿದ್ದರಾಜು, ಹನುಮಪ್ಪ, ಹೊನ್ನೂರಪ್ಪ, ಅಂದ್ರ ಶಿವಪ್ಪ ಸೇರಿದಂತೆ ಇತರರು ಇದ್ದರು.

# ಕಿತ್ತೂರು ಚೆನ್ನಮ್ಮ ನಾಡಿನ ಸ್ತ್ರೀ ಕುಲಕ್ಕೆ ಮಾದರಿ ಮಹಿಳೆ ಶಾಸಕ ಎನ್ ಟಿ ಶ್ರೀನಿವಾಸ್

● ವಾರ್ತಾಲೋಕ ವಾರ್ತೆ





**ಕೂಡ್ಲಿಗಿ: ಅ24.** ವೀರ ರಾಣಿ ಕಿತ್ತೂರು ಚೆನ್ನಮ ನಾಡಿನ ಸ್ತ್ರೀ ಕುಲಕ್ಕೆ ಮಾದರಿ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು. ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಬುಧವಾರ ತಾಲೂಕು ಆಡಳಿತ ಹಾಗೂ ತಾಲೂಕು ಪಂಚಮಸಾಲಿ ಸಮಾಜದ ವತಿಯಿಂದ ಏರ್ಪಡಿಸಿದ್ದ ವೀರ ರಾಣಿ ಕಿತ್ತೂರು ಚೆನ್ನಮ್ಮನ 200 ನೇ ವಿಜಯೋತ್ಸವ ಹಾಗೂ 246 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.
ಈ ದೇಶ ಕಂಡ ಅಪ್ರತಿಮ ವೀರ ಮಹಿಳೆ ಚೆನ್ನಮ್ಮಾಜೀ, ಬ್ರಿಟಿಷ್ ಸಾಮ್ರಾಜ್ಯದ ವಿರುದ್ದ ಗುಡುಗಿದ ಪ್ರಥಮ ಸ್ವಾತಂತ್ರ್ಯ ಸೇನಾನಿ ಎಂದರೆ ತಪ್ಪಲ್ಲ, ಬ್ರಿಟಿಷ್ ಸಾಮ್ರಾಜ್ಯದ ಸೊಕ್ಕಡಗಿಸಿ ಯುದ್ದದಲ್ಲಿ ದಿಟ್ಟವಾಗಿ ಉತ್ತರ ನೀಡಿದ ಮೊದಲ ಮಹಿಳೆ. ಚೆನ್ನಮ್ಮಾಜೀಯ ಸ್ವಾಭಿಮಾನದ ಹೋರಾಟ ಈ ನಾಡಿನ ಸಮಸ್ತ ಮಹಿಳೆಯರಲ್ಲೂ ಬರಬೇಕು. ಸ್ವಾವಲಂಬನೆ ಜೀವನ ಮಾಡುವುದರ ಮೂಲಕ ಹೆಣ್ಣುಮಕ್ಕಳು ತಾನೂ ಅಬಲೆಯಲ್ಲ, ಸಬಲೆ ಎಂದು ದಿಟ್ಟತನ ಪ್ರದರ್ಶನ ಮಾಡಬೇಕು. ಈ ಹಿಂದೆ ಹೆಣ್ಣೆಂದರೆ ಶಾಪ ಎನ್ನುವ ಕಾಲವೊಂದಿತ್ತು, ಆದರೆ ಇಂದು ಹೆಣ್ಣುಮಕ್ಕಳು ಎಲ್ಲಾ ರಂಗದಲ್ಲೂ ತನ್ನ ಛಾಪನ್ನು ಮೂಡಿಸಿದ್ದು, ಇವರಿಗೆಲ್ಲ ಪ್ರೇರಣೆ ವೀರ ರಾಣಿ ಕಿತ್ತೂರು ಚೆನ್ನಮ್ಮಾಜೀ ಆಗಬೇಕು ಎಂದು ನುಡಿದ ಅವರು, ಈಗಾಗಲೇ ಪಟ್ಟಣದ ಕೊಟ್ಟೂರು ರಸ್ತೆಯ ಮುಖ್ಯ ದ್ವಾರದಲ್ಲಿ ವೀರ ರಾಣಿ ಕಿತ್ತೂರು ಚೆನ್ನಮ್ಮಾಜೀ ವೃತ್ತಕ್ಕೆ ನಾಮಫಲಕ ಪೂಜೆ ಮಾಡಿದ್ದು, ಶೀಘ್ರದಲ್ಲೇ ಕಿತ್ತೂರು ರಾಣಿ ಚೆನ್ನಮ್ಮ ವೃತ್ತ ಸೇರಿದಂತೆ ಪಟ್ಟಣದ ಎಲ್ಲಾ ವೃತ್ತಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುವುದು ಎಂದರು. ಕ್ಷೇತ್ರದಲ್ಲಿ ಎಲ್ಲಾ ಜಾತಿ, ಜನಾಂಗದವರಿಗೂ ಸರ್ವ ರೀತಿಯ ಸೌಲಭ್ಯಗಳನ್ನು ಒದಗಿಸಲು ಹಗಲಿರುಳು ಶ್ರಮಿಸುವೆ, ನಿಮ್ಮ ಸಹಕಾರ ಅತ್ಯಗತ್ಯ ಯಾವುದೇ ಜಾತಿಗೂ ಒತ್ತು ನೀಡದೇ ಇಡೀ ಕ್ಷೇತ್ರವನ್ನೂ ಸರ್ವ ಜನಾಂಗದ ಶಾಂತಿ ತೋಟವನ್ನಾಗಿ ಮಾಡಲು ಚಿಂತನೆ ನಡೆಸಿದ್ದು, ಕ್ಷೇತ್ರದ ಸರ್ವರ ಸಹಕಾರ ನೀಡುವಂತೆ ಕೋರಿದರು.
ಇದಕ್ಕೂ ಮುನ್ನ ಪಟ್ಟಣದ ಕೊಟ್ಟೂರು ರಸ್ತೆಯಲ್ಲಿನ ವೃತ್ತಕ್ಕೆ ರಾಣಿ ಚೆನ್ನಮ್ಮಾಜೀ ವೃತ್ತವೆಂದು ನಾಮಫಲಕ ಅಳವಡಿಸಿ ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಮೆರವಣಿಗೆಗೆ ಚಾಲನೆ ನೀಡಿದರು. ವಾದ್ಯ,ಮೇಳಗಳೊಂದಿಗೆ ಅಲಂಕೃತ ವಾಹನದಲ್ಲಿ ಚೆನ್ನಮ್ಮಾಜೀ ಭಾವಚಿತ್ರವನ್ನು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ತಹಸೀಲ್ದಾರ್ ಎಂ.ರೇಣುಕಾ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಅಖಿಲ ಭಾರತ ಲಿಂಗಾಯತ ವೀರಶೈವ ಸಮಾಜದ ಗೌರವಾಧ್ಯಕ್ಷ ಗುಂಡುಮುಣುಗು ಕೆ. ತಿಪ್ಪೇಸ್ವಾಮಿ, ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ಹೊಂಬಾಳೆ ರೇವಣ್ಣ, ಜಿಲ್ಲಾ ಗೌರವಾಧ್ಯಕ್ಷ ಎಂ.ಶಿವಣ್ಣ, ಲಿಂಗಾಯತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಸುನೀಲ್ ಗೌಡ, ಟಿ.ಜಿ.ಮಲ್ಲಿಕಾರ್ಜುನ ಗೌಡ, ಹಡಗಲಿ ವೀರಭದ್ರಪ್ಪ, ಮರುಳಸಿದ್ದಪ್ಪ, ಎಂ.ಗುರುಸಿದ್ದನ ಗೌಡ, ಪಿ.ಶಿವರಾಜ್, ಕೆ.ಎಸ್.ವೀರೇಶ್, ಸಿದ್ದರಾಧ್ಯ, ಕೋಗಳಿ ಮಂಜುನಾಥ, ಗುಳುಗಿ ವೀರೇಶ್, ರಜನಿಕಾಂತ್, ಗುಡೇಕೋಟೆ ರಾಜಣ್ಣ, ಎರಿಸ್ವಾಮಿ, ಕಾಮಶೆಟ್ಟಿ ನಾಗರಾಜ, ಹಿರೇಕುಂಬಳಗುಂಟೆ ಉಮೇಶ್, ನಾಗಮಣಿ ಜಿಂಕಾಲ್, ಕೆ.ಜಿ.ಕುಮಾರ ಗೌಡ, ರಮೇಶ್ ಸೇರಿದಂತೆ ಅನೇಕರು ಇದ್ದರು.
ದರದಿ ಹೆಚ್ಚು ವೀರಣ್ಣ.

# ಪಿಎಸ್ಐ ಮರು ಪರೀಕ್ಷೆಯಲ್ಲಿ : ನಾಗರತ್ನ ಆಯ್ಕೆ

● ವಾರ್ತಾಲೋಕ ವಾರ್ತೆ



**ಹೊಸಪೇಟೆ : ಅ 24.** ಸುರಪುರ ತಾಲೂಕು ಲಿಂಗದಳ್ಳಿ ಎಸ್.ಕೆ ಗ್ರಾಮದ ಅಪ್ಪಟ ಗ್ರಾಮೀಣ ಪ್ರತಿಭೆ ಕು. ನಾಗರತ್ನ. ಎನ್. ಮಕಾಶಿಯವರು ಸಿವಿಲ್ ಪಿಎಸ್ಐಗೆ ಮೊದಲ ಯಶಸ್ಸಿನಲ್ಲೇ ಆಯ್ಕೆಯಾಗಿದ್ದಾರೆ. 545 ಪಿಎಸ್ಐಗೆ ಹುದ್ದೆಗಳ ಭರ್ತಿಗೆ ನಡೆಸಿದ್ದ ಪರೀಕ್ಷೆಯಲ್ಲಿ ಅಕ್ರಮ ನಡೆದು ಪರೀಕ್ಷಾ ಪ್ರಕ್ರಿಯೆ ವಿವಾದಕ್ಕೆ ಸಿಲುಕಿತ್ತು. ಬಳಿಕ ಹೈಕೋರ್ಟ್ ಆದೇಶದಂತೆ ಸರ್ಕಾರ ಕಳೆದ ಜನವರಿ ತಿಂಗಳಲ್ಲಿ ಮರು ಪರೀಕ್ಷೆ ನಡೆಸಿತ್ತು. ಪ್ರಾಥಮಿಕ, ಪ್ರೌಢ 'ಶಾಲಾ, ಪಿಯುಸಿ, ಡಿಗ್ರಿ ಸೇರಿ ಎಲ್ಲಾ ಪರೀಕ್ಷೆಗಳಲ್ಲಿ ಅಗ್ರಶ್ರೇಯಾಂಕದಲ್ಲಿ ತೇರ್ಗಡೆಯಾದ ನಾಗರತ್ನ ಬಾಲ್ಯದಿಂದಲೂ ಪೊಲೀಸ್ ಇಲಾಖೆ ಸೇರಬೇಕೆಂಬ ಕನಸು ಕಂಡಿದ್ದರು. ಇತ್ತೀಚೆಗೆ ಜರುಗಿದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಆರಕ್ಷಕ ಉಪ ನಿರೀಕ್ಷಕ ಪರೀಕ್ಷೆಯಲ್ಲಿ ಪ್ರಥಮ ಪತ್ರಿಕೆಯ ಲಿಖಿತ ಪರೀಕ್ಷೆಯಲ್ಲಿ 50 ಅಂಕಗಳಿಗೆ 39 ಹಾಗೂ ದ್ವಿತೀಯ ಪತ್ರಿಕೆಯ ಬಹು ಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆಯ 150 ಅಂಕಗಳಿಗೆ 81.75 ಅಂಕಗಳನ್ನು ಪಡೆದು ಒಟ್ಟು ಶೇ. 120.75 ಅಂಗಶ್ರೇಯಾಂಕದ ಫಲಿತಾಂಶ ಲಭಿಸಿದೆ. ಎಸ್‌ಟಿ ಮೀಸಲಾತಿ ಅಡಿಯಲ್ಲಿ . ಪಿಎಸ್ಐ ಮರು ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾರೆ ತಂದೆ, ತಾಯಿ ಹಾಗೂ ಕುಟುಂಬಸ್ಥರಲ್ಲಿ ಹೆಮ್ಮೆತಂದಿದ್ದು, ನಾಗರತ್ನ ಸಾಧನೆಗೆ ಸಂಬಂಧಿಕರು ಹಾಗೂ ಅಯ್ಯಳಪ್ಪ ಸಾಹುಕಾರ್ ಲಿಂಗದಳ್ಳಿ ಮತ್ತು ಯಂಕಪ್ಪ ಸಾಹುಕಾರ್ ಬಂಡೊಳ್ಳಿ ಶರಣಗೌಡ ಬಂಡೊಳ್ಳಿ ಗ್ರಾಮಸ್ಥರು ಅಭಿನಂದಿಸಿದ್ದಾರೆ.
ವರದಿ ಅಂಬರೀಶ್ ನಾಯಕ್



● ವಾರ್ತಾಲೋಕ ವಾರ್ತೆ

ಕುರುಗೋಡು ತಾಲೂಕುಪಂಚಾಯಿತಿ ಕಛೇರಿಯಲ್ಲಿ ವೀರವನಿತೆ ಕಿತ್ತೂರುರಾಣಿಚೆನ್ನಮ್ಮನವರ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಎಲ್ಲರೂ ಪುಷ್ಪನಮನ ಸಲ್ಲಿಸಿ ಶ್ರದ್ಧಾ-ಭಕ್ತಿಯಿಂದ ಪೂಜಿಸಿ, ನಮಸ್ಕರಿಸಿದರು. ತಾಪಂ. ಯೋಜನಾಧಿಕಾರಿ ರಾಧಿಕಾ, ಪಂಚಾಯಿತಿರಾಜ್ ಸಹಾಯಕನಿರ್ದೇಶಕ ಅನಿಲ್‌ಕುಮಾರ್, ಬಸವನಗೌಡ, ಸೇರಿದಂತೆ ಕುರುಗೋಡು ತಾಪಂ. ಕಛೇರಿಯ ನೌಕರರು, ಹಾಗು ಸಿಬ್ಬಂದಿವರ್ಗದವರು ಇದ್ದರು.

# ಸಂಡೂರು ಉಪ ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸಿ ಗೆಲ್ಲುತ್ತೇವೆ : ವಿಜಯೇಂದ್ರ

● ವಾರ್ತಾಲೋಕ ವಾರ್ತೆ



**ಬಳ್ಳಾರಿ ಅ 24** ಭಾರತೀಯ ಜನತಾ ಪಕ್ಷದಲ್ಲಿ ಯಾವುದೇ ಬಣ ಅಥವಾ ಬಂಡಾಯವಿಲ್ಲ ಎಲ್ಲರೂ ಒಗ್ಗಟ್ಟಾಗಿ ಉಪಚುನಾವಣೆಯನ್ನು ಎದುರಿಸಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ ಎಂದು ವಿಶ್ವಾಸವನ್ನು ವ್ಯಕ್ತಪಡಿಸಿದರು.
ಅವರಿಂದು ಮಾಜಿ ಸಚಿವ ಬಿ ಶ್ರೀರಾಮುಲುರವರ ನಿವಾಸದಲ್ಲಿ ಉಪಹಾರ ಸೇವಿಸಲು ಆಗಮಿಸಿದ ಸಂದರ್ಭದಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿ, ಕಳೆದ ನಾಲ್ಕು ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಈ ತುಕಾರಾಂ ಸಂಡೂರಿನಲ್ಲಿ ಗೆದ್ದಿದ್ದಾರೆ, ಆದರೆ ಆ ಶಾಸಕರಿಂದ ಯಾವುದೇ ಅಭಿವೃದ್ಧಿ ಆಗಿಲ್ಲ, ಮತ್ತೆ ಅವರ ಪತ್ನಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿದೆ ಇದು ಕುಟುಂಬ ರಾಜಕಾರಣಕ್ಕೆ ದಾರಿ ಮಾಡಿಕೊಟ್ಟಿದೆ, ಅವರಿಂದ ಮತ್ತಿನ್ನೇನು ಅಭಿವೃದ್ಧಿ ಕಾರ್ಯಗಳನ್ನು ನಿರೀಕ್ಷಿಸಲು ಸಾಧ್ಯ ಎಂದು ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಬಿ ಎಸ್ ವಿಜಯೇಂದ್ರ ಪ್ರಶ್ನಿಸಿದರು.
ಈ ಸಂದರ್ಭದಲ್ಲಿ ಮಾಜಿ ಸಚಿವ ಬಿ ಶ್ರೀರಾಮುಲು ಮಾತನಾಡಿ, ರಾಜ್ಯಾಧ್ಯಕ್ಷ ವಿಜಯೇಂದ್ರರವರು ಸಿರುಗುಪ್ಪದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗುತ್ತಿದ್ದಾರೆ ಮಾರ್ಗ ಮಧ್ಯೆ ನಮ್ಮ ಮನೆಗೆ ಬಂದು ಉಪಹಾರ ಸೇವಿಸಿದ್ದಾರೆ ಅಷ್ಟೇ ಎಂದರು, ಸಂಡೂರು ಉಪಚುನಾವಣೆ ಕುರಿತು ಮಾತನಾಡಿ, ಪಕ್ಷದಲ್ಲಿ ಯಾರಿಗೂ ಅಸಮಾಧಾನವಿಲ್ಲ ಎಲ್ಲರೂ ಹೊಂದಾಣಿಕೆಯಿಂದ ಬಿಜೆಪಿ ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತು ಅವರನ್ನು ಗೆದ್ದೇ ಗೆಲ್ಲಿಸುತ್ತೇವೆ ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ಮಾಜಿ ಶಾಸಕ ಸುರೇಶ್ ಬಾಬು, ಬಳ್ಳಾರಿ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಮತ್ತು ಶ್ರೀರಾಮುಲು ಅವರ ಧರ್ಮಪತ್ನಿ ಭಾಗ್ಯಲಕ್ಷ್ಮಿ ಇದ್ದರು.

# ಭ್ರೂಣಲಿಂಗ ಪತ್ತೆ ಮಾಡಿದವರ ಮೇಲೆ ಪ್ರಕರಣ ದಾಖಲಿಸಿ

**ಬಾಗಲಕೋಟೆ :** ಮಹಾಲಿಂಗ ಪುರದ ಖಾಸಗಿ ಆಸ್ಪತ್ರೆ ಯೊಂದರಲ್ಲಿ ಭ್ರೂಣಲಿಂಗ ಪತ್ತೆ ನಡೆಯುತ್ತಿದೆ ಎಂದು ಜಿಲ್ಲಾ ಆರೋಗ್ಯಾಕಾರಿಗಳೆ ದಾಳಿ ನಡೆಸಿ ಸೀಜ್ ಮಾಡಿ ಈಗ ದೂರು ದಾಖಲಿಸಲು ಹಿಂದೇಟು ಹಾಕುತ್ತಿರುವುದು ಏಕೆ ಎಂದು ಜಯ ಕರ್ನಾಟಕ ಜನಪರ ವೇದಿಕೆ ಬೆಳಗಾವಿ ಜಿಲ್ಲಾಧ್ಯಕ್ಷ ಶಿವರೆಡ್ಡಿ ಉತ್ತರಡ್ಡಿ ಆಕ್ರೋಶ ವ್ಯಕ್ತಪಡಿಸಿದರು.
ನಗರದ ಪ್ರೆಸ್‌ಕ್ಲಬ್‌ನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ರಾಜೇಂದ್ರ ಪಾಟೀಲ ಅವರ ಆಸ್ಪತ್ರೆಯಲ್ಲಿ ಭ್ರೂಣಲಿಂಗ ಪತ್ತೆ ನಡೆಯುತ್ತಿದೆ ಎಂದು ದಾಳಿ ಮಾಡಲಾಗಿತ್ತು. ಅದರಂತೆ ಯಂತ್ರೋಪಕರಣವಿದ್ದ ಕೊಠಡಿಯನ್ನು ಆರೋಗ್ಯಾಕಾರಿ ಸೀಜ್ ಮಾಡಿದ್ದರು. ನಂತರ ಅವರು ದೂರು ನೀಡಲು ಹಿಂದೇಟು ಹಾಕುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಕಾರಿ ಕೆ.ಎಂ.ಜಾನಕಿ ಅವರಿಗೆ ದೂರು ಸಲ್ಲಿಸಿ ಕ್ರಮಕ್ಕೆ 8 ದಿನಗಳ ಗಡುವು ನೀಡುತ್ತೇವೆ. ಶಿಸ್ತು ಕ್ರಮ ಆಗದಿದ್ದರೇ ಹೋರಾಟ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು.
ಸಂಘಟನೆಯ ಬಾಗಲಕೋಟೆ ಜಿಲ್ಲಾಧ್ಯಕ್ಷೆ ಶೋಭಾ ಬಂಡಿವಡ್ಡರ, ಲಕ್ಷ ?ಮಣ ಮೆಳ್ಳಿಗೇರಿ, ಸುಜಾತಾ ಬಂಡಿವಡ್ಡರ, ಮಹಾಲಿಂಗ ಅಂಬಲಜರಿ ಇದ್ದರು.

# ಒಳಮೀಸಲಾತಿ ವರ್ಗೀಕರಣವನ್ನು ಸಚಿವ ಸಂಪುಟ ಸಭೆಯಲ್ಲಿ ತಿರಸ್ಕರಿಸುವಂತೆ ಹಾಗೂ ಕಾಂತರಾಜು ಆಯೋಗ ವರದಿಯನ್ನು ಬಹಿರಂಗಪಡಿಸುವಂತೆ ಲೋಕೇಶ್ ಭಜಂತ್ರಿ ಅಗ್ರಹ

● ವಾರ್ತಾಲೋಕ ವಾರ್ತೆ



**ಕೊಪ್ಪಳ :ಅ24** ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ಅನಾವರಣ ಕಾರ್ಯಕ್ರಮ ಹಮ್ಮಿಕೊಂಡಿದ್ದು. ಈ ಸಂದರ್ಭದಲ್ಲಿ ಕುಕುನೂರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಗಮಿಸಿದ ದಿನೇಶ್ ಗುಂಡೂರಾವ್ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸಚಿವರು , ಬಸವರಾಜ್ ರಾಯರೆಡ್ಡಿ ಶಾಸಕರು ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಇವರಿಗೆ ಮನವಿಯನ್ನು ಸಲ್ಲಿಸಲಾಯಿತು
ಕೊಪ್ಪಳ ಜಿಲ್ಲೆ ಕುಳುವ ಮಹಾಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲೋಕೇಶ್ ಭಜಂತ್ರಿ
ಮಾತನಾಡುತ್ತಾ ಪರಿಶಿಷ್ಟ ಜಾತಿಯ ಒಳ ಮೀಸಲಾತಿಗೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡುವುದು ಸರಿ ಯಷ್ಟೇ. ಆದರೆ ಈ ಬಗ್ಗೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯ ಒಳ ಮೀಸಲಾತಿಗಾಗಿ ಕುರಿತಾಗಿ ಅವೈಜ್ಞಾನಿಕ, ಅಕಾರ್ತಿಕ, ಅಸಮರ್ಥನಿಯ ದತ್ತಾಂಶಗಳನ್ನು ಆಧರಿಸಿ ಒಳ ಮೀಸಲಾತಿ ಮುಂದಾಗಿರುವುದು ಸಾಮಾಜಿಕ ನ್ಯಾಯದ ಕಗ್ಗೊಲೆಯಾಗಿದೆ. ಆದಕಾರಣ ಪರಿಶಿಷ್ಟ ಜಾತಿಯ 101 ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಪ್ರಾತಿನಿಧ್ಯ ಕುರಿತಾದ ಸಮಗ್ರ ಹಾಗೂ ವಸ್ತುನಿಷ್ಠ ಅಂಕಿ ಅಂಶಗಳ ಕೊರತೆ ಇದ್ದು. ಈ ಬಗ್ಗೆ ವೈಜ್ಞಾನಿಕ ಅಧ್ಯಯನ ಕೈಗೊಳ್ಳದೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಏಕಾಏಕಿ ಒಳ ಮೀಸಲಾತಿ ವರ್ಗಿಕರಣ ಕುರಿತಾಗಿ ಏಕ ಪಕ್ಷಿಯ ನಿರ್ಣಾಯಕಗಳನ್ನು ಕೈಗೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರಗಳನ್ನು ತೀವ್ರವಾಗಿ ಖಂಡಿಸಲಾಗುತ್ತದೆ.
ಅವಕಾಶ ವಂಚಿತ ಅಲೆಮಾರಿ, ಬಂಜಾರ, ಕೊರಮ, ಕೊರಚ, ಭೋವಿ ಹಾಗೂ ಇನ್ನಿತರ ಜಾತಿಗಳ ಮೂಲಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ ಮತ್ತು ಆಗ್ರಹಿಸುತ್ತದೆ.
ಈ ಸಂದರ್ಭದಲ್ಲಿ
ಭೊವಿ ದುರಗಪ್ಪ ಕರಮುಡಿ ಭೊವಿ ಸಮಾಜದ ಯಲಬುರ್ಗಾ ತಾಲ್ಲೂಕ ಅಧ್ಯಕ್ಷರು ಹನಮಂತಪ್ಪ ಕೋಳಿಹಾಳ ಗೋರಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ್ ಬಳೊಟಗಿ ಕುಮಾರ ಬಳಗೇರಿ, ವಿಶ್ವನಾಥ ಪುಣಕೇರಿ, ಗಣೇಶ ಬೋವಿ, ಮುತ್ತಣ್ಣ ತಿರ್ಲಾಪುರ, ಮಾರುತಿ ತೊಂಡೆಹಾಳ, , ಪ್ರವೀಣ್ ಬೋವಿ, ಗಣೇಶ ಇಲಕಲ್, ಇತರರು ಇದ್ದರು. ವರದಿಗಾರರು ಮಂಗಳೇಶ ಎಸ್ ಮಂಗಳೂರು

# ಕ್ರೀಡೆಗಳಿಂದ ಮನಸ್ಸು ವಿಕಸನ




**ಬೀಳಗಿ:** ಕ್ರೀಡೆಗಳಿಂದ ಯುವಕರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಜೆ.ಟಿ. ಪಾಟೀಲ ಹೇಳಿದರು.
ತಾಲೂಕಿನ ಯಡಹಳ್ಳಿಯಲ್ಲಿ ವಾಲ್ಮೀಕಿ ಜಯಂತಿ ಅಂಗವಾಗಿ ಶನಿವಾರ ನಡೆದ ಪುರುಷರ ಅಂತಾರಾಜ್ಯಮಟ್ಟದ ಮುಕ್ತ ಕಬಡ್ಡಿ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.
ಕ್ರೀಡೆ ಯುವಕರನ್ನು ಶಾರೀರಿಕವಾಗಿ ಬೆಳವಣಿಗೆ ಮಾಡುವುದರೊಂದಿಗೆ ಮನಸ್ಸನ್ನೂ ವಿಕಸನಗೊಳಿಸುತ್ತದೆ ಎಂದರು. ಅದರಲ್ಲಿ ಕಬಡ್ಡಿ ಪಂದ್ಯಾವಳಿಗಳಿಗೆ ರಾಜ್ಯ, ದೇಶ, ಅಂರಾರಾಷ್ಟ್ರೀಯ ಮಟ್ಟಗಳಲ್ಲಿ ಸಾಕಷ್ಟು ಪ್ರೋತ್ಸಾಹವಿದೆ. ಅಲ್ಲದೆ, ಹಲವಾರು ಯುವಕರು ಕ್ರೀಡೆಗಳಿಂದ ತಮ್ಮ ಬದುಕು ರೂಪಿಸಿಕೊಂಡಿದ್ದಾರೆ ಎಂದು ತಿಳಿಸಿದರು.
ಮುಳುಗಡೆ ಸಂತ್ರಸ್ತರ ಹೋರಾಟ ಸಮಿತಿ ಅಧ್ಯಕ್ಷ ಎ. ವಿ. ದೇಸಾಯಿ, ಹಿರಿಯರಾದ ಎಸ್.ಟಿ. ಪಾಟೀಲ, ದೊಡ್ಡಣ್ಣ ದೇಸಾಯಿ, ಸದಾನಂದಗೌಡ ನಂದಗಾವಿ, ಮೋಹನ ದೇಸಾಯಿ, ರಮೇಶ ಗೌಡ ಪಾಟೀಲ, ಜಿಪಂ ಮಾಜಿ ಅಧ್ಯಕ್ಷ ಬೆನ್ನಪ್ಪ ಬೀಳಗಿ, ಜಿಪಂ ಮಾಜಿ ಸದಸ್ಯ ಮಗಿಯಪ್ಪ ದೇವನಾಳ, ದುಂಡಪ್ಪ ದೇವನಾಳ, ವಿಜಯ ವಾಲಿಕಾರ, ಅರ್ಜುನ ಕಾಂಬಳೆ, ಕಮರಲಿ ನದಾಫ್ ಇತರರಿದ್ದರು.

# ಅಭಿವೃದ್ಧಿಗಾಗಿ ವಿನೂತನ ಪ್ರಯೋಗ ಪಟ್ಟಣ ಪಂಚಾಯಿತಿಯಿಂದ ನಮ್ಮ ನಡೆ ವಾರ್ಡಿನ ಕಡೆ

● ವಾರ್ತಾಲೋಕ ವಾರ್ತೆ



**ಮರಿಯಮ್ಮನಹಳ್ಳಿ : ಅ. 24** ಪಟ್ಟಣ ಪಂಚಾಯತಿಯ ಅಧ್ಯಕ್ಷರು, ಮುಖ್ಯಾಧಿಕಾರಿಗಳು, ಸಿಬ್ಬಂದಿಗಳು, ಸ್ಥಾಯಿ ಸಮಿತಿ ಅಧ್ಯಕ್ಷರು, ವಾರ್ಡಿನ ಸದಸ್ಯರು ಸೇರಿ ಪಟ್ಟಣದಲ್ಲಿ ಇಂದು ವಿನೂತನವಾಗಿ ಅಭಿವೃದ್ಧಿಗಾಗಿ "ನಮ್ಮ ನಡೆ ವಾರ್ಡಿನ ವಾರ್ಡಿನ ಕಡೆ" ಎನ್ನುವ ಘೋಷವಾಕ್ಯದೊಂದಿಗೆ ಹೊಸ ಪ್ರಯೋಗವನ್ನು ಪ್ರಾರಂಭಿಸಿದ್ದಾರೆ.
ಅಭಿವೃದ್ಧಿಗಾಗಿ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಿಂದ ವಿನೂತನ ಪ್ರಯೋಗ ಪ್ರಾರಂಭವಾಗಿದೆ. ಮೊದಲನೇ ದಿನದಂದು 1,2,ಮತ್ತು 15ನೇ ವಾರ್ಡ್ ಗಳಿಗೆ ಭೇಟಿ ನೀಡಿ ರಸ್ತೆ, ಚರಂಡಿ, ಕುಡಿಯುವ ನೀರಿನ ಸಂಪರ್ಕದ ವೀಕ್ಷಿಸಿದರು, ರಸ್ತೆ, ಚರಂಡಿಗಳು ಒತ್ತುವರಿಯಾಗಿದ್ದನ್ನು
ಮತ್ತು ಸ್ವಚ್ಛತೆ ಇಲ್ಲದಿರುವುದನ್ನು, ನಳ ಹಾಕಿಕೊಂಡ ತೆರೆದ ಕೊಳಾಯಿಗಳ ಗುಂಡಿಯಲ್ಲಿ ನಿಂತ ಕೊಳಕು ನೀರನ್ನು ಕಂಡು ಅಧ್ಯಕ್ಷರಾದ ಹುಸೇನ್ ಭಾಷ ಅವರು ಕೆಂಡಮಂಡಲವಾಗಿ ಬೇಸರ ವ್ಯಕ್ತಪಡಿಸಿ, ನಮ್ಮ ಮನೆಗಳ ಮುಂದೆ ನಾವೇ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಈ ರೀತಿಯ ಸ್ವಚ್ಛತೆ ಇಲ್ಲದಿದ್ದರೆ, ಆರೋಗ್ಯ ಕಾಪಾಡಿಕೊಳ್ಳಲು ಹೇಗೆ ಸಾಧ್ಯ, ರೋಗಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ ನಮ್ಮ ಸುತ್ತಮುತ್ತ ಪರಿಸರವನ್ನು ನಾವೇ ಸ್ವಚ್ಛವಾಗಿಟ್ಟುಕೊಳ್ಳಬೇಕು ಮತ್ತು ಖಾಲಿ ನಿವೇಶನಗಳಲ್ಲಿ ಗಿಡಗಂಟೆಗಳು ಬೆಳೆದಿದ್ದನ್ನು ಗಮನಿಸಿ ಅವುಗಳನ್ನು ಕತ್ತರಿಸಿ ಸ್ವಚ್ಛ ವಾಗಿಟ್ಟುಕೊಳ್ಳಲು ಮಾಲೀಕರಿಗೆ ತಿಳಿಸಿದರು.
ಅಧ್ಯಕ್ಷ ಹುಸೇನ್ ಬಾಷ ಮಾತನಾಡಿ 1, 2 ಮತ್ತು 15 ವಾರ್ಡಗಳು ಅಭಿವೃದ್ಧಿಯಿಂದ ಹಿಂದಿವೆ ಹಾಗಾಗಿ ಈ ವಾರ್ಡ್ ಗಳಿಗೆ ಮೊದಲು ಬೇಟಿ ನೀಡುತ್ತಿದ್ದು . ಫಾರಂ 3 ಕೊಡಲು ತುಂಬಾ ಕಷ್ಟವಾಗುತ್ತಿತ್ತು ನೈಜತೆಯನ್ನು ಅರಿತು ನೀಡಲು ಈ ಕಾರ್ಯಕ್ರಮ ರೂಪಿಸಲಾಗಿದೆ.ಅಮೃತ2 ಯೋಜನೆ ಕುಡಿಯ ನೀರು ಪೈಪ್ ಹಾಕಲು ಸ್ಥಳಾವಕಾಶವಿಲ್ಲದೆ ರಸ್ತೆ ಚರಂಡಿಗಳನ್ನು ಒತ್ತುವರಿ ಮಾಡಿದ್ದಾರೆ. ನಂತರ ಯುಜಿಡಿ ಸಹ ಬರುತ್ತದೆ ಆಗ ಇನ್ನು ಸಮಸ್ಯೆ ಉದ್ಭವವಾಗುತ್ತದೆ. ಹಾಗಾಗಿ ಸೋಮವಾರ ಪೈಪ್ ಲೈನ್ ಕಾಮಗಾರಿ ಪ್ರಾರಂಭಿಸಲಾಗುವುದು. ಅಂತಹ ಸಂದರ್ಭದಲ್ಲಿ ಅಡ್ಡಿಯಾದಂತಹ ಕಟ್ಟಡಗಳನ್ನು ತೆರವುಗೊಳಿಸಲು ಸೂಚಿಸಲಾಗಿದೆ.
ಪ್ರೆಜರ್ ಫಿಲ್ಟರ್ ನಾವು ಮಾಡಿಸಿದ್ದೇವೆ ಎಂದು ಯಾರೋ ಹೇಳುತ್ತಿದ್ದಾರೆ. ಅದನ್ನು ಯಾರು ಮಾಡಿಸಿಲ್ಲ ಸ್ಥಳೀಯ ಪಂಚಾಯಿತಿಯಿಂದ 2019 ರಿಂದ ಇಲ್ಲಿಯವರೆಗೂ 51.60ಲಕ್ಷದ ಉಳಿತಾಯದ ಹಣ ನಮ್ಮಲ್ಲಿದೆ. ಪ್ರೆಜರ್ ಫಿಲ್ಟರ್ ಗಾಗಿ 70 ಲಕ್ಷ ಬೇಕಾಗಿದೆ. ಹೆಚ್ಚಿನ ಹಣಕ್ಕಾಗಿ, ಜಿಲ್ಲಾಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರ ಗಮನಕ್ಕೆ ತಂದಿದ್ದು ಹೆಚ್ಚುವರಾಗಿ 20 ಲಕ್ಷವನ್ನು ಒದಗಿಸಿಕೊಡುತ್ತೇವೆ ಕೂಡಲೇ ಟೆಂಡರ್ ಕರೆದು ಕಾಮಗಾರಿ ಪ್ರಾರಂಭಿಸಿ ಎಂದು ಹೇಳಿದ್ದಾರೆ. ಹಾಗಾಗಿ ಒಂದು ತಿಂಗಳಲ್ಲಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.
ಮುಖ್ಯಾಧಿಕಾರಿ ಖಾಜಾ ಮೈನುದ್ದೀನ್ ಮಾತನಾಡಿ ನಾವು ಕಚೇರಿಯಲ್ಲಿ ಕುಳಿತುಕೊಂಡು ಪರಿಪೂರ್ಣವಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ, ಪ್ರಮಾಣಿಸಿದರು ಪ್ರತ್ಯಕ್ಷವಾಗಿ ನೋಡು ಎನ್ನುವ ಗಾದೆ ಹಾಗೆ ನಾವು ಕಚೇರಿಯನ್ನು ಬಿಟ್ಟು ಸ್ಥಳಕ್ಕೆ ಬಂದು ಪರಿಶೀಲಿಸಿ ನೋಡಿದಾಗ ಸಮಸ್ಯೆಗಳ ಅರವಾಗುತ್ತದೆ. ಹಾಗಾಗಿ ಅಧ್ಯಕ್ಷರು ಸದಸ್ಯರು ಮತ್ತು ನಮ್ಮ ಸಿಬ್ಬಂದಿಗಳೊಂದಿಗೆ ವಾರ್ಡ್ ವೀಕ್ಷಣೆ ಮಾಡಿ, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲು ಮತ್ತು ಸಮಸ್ಯೆಗಳನ್ನು ತಕ್ಷಣದಲ್ಲೇ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಲು
ಸಾಧ್ಯವಾಗುತ್ತದೆ.ಹಾಗಾಗಿ ನಮ್ಮ "ನಡೆ ವಾರ್ಡ್ ಕಡೆ" ಎನ್ನುವ ಘೋಷವಾಕ್ಯದೊಂದಿಗೆ ವಾರ್ಡ್ ವೀಕ್ಷಣೆ ಮಾಡುತ್ತಿದ್ದೇವೆ ಈ ಸಂದರ್ಭದಲ್ಲಿ ಕಂಡುಬಂದಿದ್ದು ಪ್ರಮುಖವಾಗಿ ಮಹಿಳೆಯರಿಗೆ ಶೌಚಾಲಯದ ಕೊರತೆ ಇದೆ. ಶೌಚಾಲಯ ನಿರ್ಮಾಣಕ್ಕಾಗಿ 15 ಲಕ್ಷ ರುಪಾಯಿಗಳ ಟೆಂಡರ್ ಆಗಿದೆ ಅದನ್ನು ಕೂಡಲೇ ಕಾಮಗಾರಿ ಪ್ರಾರಂಭಿಸಲು ಸೂಚಿಸುತ್ತೇವೆ. ಸ್ವಚ್ಛ ಭಾರತ್ ಮಿಷನ್ ನಲ್ಲಿ ಶೌಚಾಲಯ ವ್ಯವಸ್ಥೆ ಮಾಡಲಾಗುವುದು. ಮತ್ತು ಫಾರಂ– 3 ಕೊಡುವ ವಿಚಾರದಲ್ಲಿ ಸ್ಥಳವನ್ನು ವೀಕ್ಷಿಸಲಾಗಿ ಸಮಸ್ಯೆಗಳನ್ನು ಗಮನಿಸಲಾಗಿದೆ. ಸರಿಯಾದ ದಾಖಲೆಗಳಿದ್ದರೆ ದಾಖಲೆಗಳ ಪ್ರಕಾರ ನಿಯಮಾನುಸಾರವಾಗಿ ನೀಡಲು ಮೇಲಧಿಕಾರಿಗಳ ಗಮನಕ್ಕೆ ತಂದು ಫಾರಂ 3 ಕೊಡಲಾಗುವುದು. ತೆರವು : ಸೋಮವಾರ ಪೈಪ್ ಲೈನ್ ಕಾಮಗಾರಿ ಪ್ರಾರಂಭಿಸಲಾಗುವುದು. ರಸ್ತೆ ಮತ್ತು ಚರಂಡಿಗಳು ಬಹುತೇಕವಾಗಿ ಒತ್ತುವರಿಯಾಗಿದ್ದು.
ಅಮೃತ 2ಯೋಜನೆಯಲ್ಲಿ ಮನೆಮನೆಗೂ ಕುಡಿಯುವ ನೀರಿನ ಪೈಪ್ ಮತ್ತು ನಳ ಹಾಕುವುದಕ್ಕೆ ತೊಂದರೆಯಾಗುತ್ತದೆ. ಹಾಗಾಗಿ ಅಭಿವೃದ್ಧಿಯ ದೃಷ್ಟಿಯಿಂದ ಅನಧಿಕೃತವಾಗಿ ಒತ್ತುವರಿಯಾಗಿರುವ ಕಟ್ಟಡಗಳನ್ನು ಅನಿವಾರ್ಯವಾಗಿ ತೆರವುಗೊಳಿಸಲಾಗುವುದು ಎಂದರು.
ಮನವಿ : ಸಮತಾ ಸೈನಿಕ ದಳ ಸಂಘಟನೆಯ ಕಾರ್ಯದರ್ಶಿ ಯಾದ ಎಲ್. ಸ್ವಾಮಿ ಇವರು ಅಧ್ಯಕ್ಷರ ಪರವಾಗಿ 15 ವಾರ್ಡಿನ, 9ನೇ ಅಂಗನವಾಡಿ ಕೇಂದ್ರಕ್ಕೆ ಪಟ್ಟಣ ಪಂಚಾಯಿತಿ ಯಿಂದ ನಿವೇಶನ ಗುರುತಿಸಲು ಮನವಿ ಕೊಡಲಾಯಿತು. ಮತ್ತು ಎಂ. ದುರುಗಪ್ಪ ನೇತೃತ್ವದಲ್ಲಿ ಮಹಿಳೆಯರಿಗಾಗಿ ಸಾಮೂಹಿಕ ಶೌಚಾಲಯ ನಿರ್ಮಿಸಲು ಮನವಿ ಸಲ್ಲಿಸಿದರು.
ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಸದಸ್ಯರಾದ ಎಲ್ ವಸಂತ. ಮರಡಿ ಸುರೇಶ, ಎಲ್. ಪರುಶುರಾಮ, ಮುಖಂಡರಾದ ಹುಲಿಗಿ ಬಾಯಿ ರುದ್ರ ನಾಯಕ್, ಜೊತಿ ಸುರೇಶ, ಮಂಜುನಾಥ, ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಎಲ್. ಮಂಜುನಾಥ, ಊರಿನ ಮುಖಂಡರಾದ ಎಲ್. ನಾಗರಾಜ, ಬಿ. ಆನಂದಪ್ಪ, ಎಂ. ದುರುಗಪ್ಪ, ಸರದಾರ, ಸ್ವಾಮಿ ಇತರರಿದ್ದರು.
ವರದಿ ಲಕ್ಕಿಮರದ.ಮಂಜುನಾಥ

# ವಿದ್ಯಾರ್ಥಿಗಳಿಗೆ ಆರ್ಥಿಕ ನೆರವುನೀಡುವಲ್ಲಿ ವಿದ್ಯಾ ಪೋಷಕ ಸಂಸ್ಥೆಯ ಪಾತ್ರ ಅನನ್ಯ



**ವಿಜಯಪುರ,:** ವಿದ್ಯಾ ಪೋಷಕ ಸಂಸ್ಥೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ ನೀಡುವುದರ ಜೊತೆಗೆ ಮಕ್ಕಳಿಗೆ ಕೌಶಲ್ಯ ತರಬೇತಿ ಕೊಡುವುದರಲ್ಲಿ ಒಂದು ಹೆಜ್ಜೆ ಮುಂದಿದೆ. ಈ ನಿಟ್ಟಿನಲ್ಲಿ ವಿದ್ಯಾ ಪೋಷಕ ಸಂಸ್ಥೆಯ ಪಾತ್ರ ಅನನ್ಯವಾಗಿದೆ ಎಂದು ಬ0ಗಾರಮ್ಮ ಸಜ್ಜನ ಕಾಲೇಜಿನಪ್ರಾಂಶುಪಾಲ ಡಾ. ವೈ ತಮ್ಮಣ್ಣ ಹೇಳಿದರು.

ಗುರುವಾರ ನಗರದ ಬ0ಗಾರಮ್ಮ ಸಜ್ಜನ ಕಾಲೇಜಿನ ಸಮ್ಮೇಳನ ಸಭಾಂಗಣದಲ್ಲಿ ವಿದ್ಯಾ ಪೋಷಕ ಸಂಸ್ಥೆಯಿ0ದ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ 25.50 ಲಕ್ಷ ಆರ್ಥಿಕ ನೆರವುಕಾರ್ಯಕ್ರಮವನ್ನುಉ-ದ್ಘಾಟಿಸಿ ಮಾತನಾಡಿ, ಮಕ್ಕಳಿಗೆ ಆರ್ಥಿಕ ನೆರವಿನ ಜೊತೆಗೆ ಸರಿಯಾದ ದಾರಿ ತೋ-ರಿಸುವದು ಅಷ್ಟೇ ಪ್ರಮುಖವಾಗಿದೆ. ವಿದ್ಯಾ ಪೋಷಕ ಸಂಸ್ಥೆಯಿ0ದ ಮಕ್ಕಳಿಗೆ ನೀಡುವ ಆರ್ಥಿಕ ಸಹಾಯವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಮಕ್ಕಳಿಗೆ ಕಿವಿ ಮಾತು ಹೇಳಿದರು.

ಸಂಗಮೇಶ್ವರ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಎಸ್.ಎಂ. ಚೋಳಕೆ ಮಾತನಾಡಿ, ಮಕ್ಕಳಲ್ಲಿ ನಿರಂತರ ಉತ್ಸಾಹ, ಶಿಸ್ತು, ಶ್ರದ್ಧೆ ಬೆಳೆಸಿಕೊಂಡು ಮಕ್ಕಳುವಿದ್ಯಾರ್ಥಿ ಜೀವನದಲ್ಲಿ ಕನಕಸುಗಳನ್ನು ಬೆಳೆಸಿಕೊಂಡು ಮುನ್ನಡೆಯಬೇಕು. ವಿದ್ಯಾ ಪೋಷಕ ಸಂಸ್ಥೆ ನೀಡುವ ಆರ್ಥಿಕ ಯೋಜನೆಯ ಸದ್ವಿನಿಯೋಗ ಪಡೆಯುವಂತೆ ಹೇಳಿದರು.

ಹೆಸ್ಕಾಂ ಸಹಾಯಕ ಕಾಯ9ನಿವಾ9ಹಕ ಎ0ಜಿನಿಯರ್ ಬಾಲಾಜಿಸಿಂಗ್ ಎಂ. ಮಾತನಾಡಿ, ವಿದ್ಯಾರ್ಥಿಗಳು ಸಂಸ್ಥೆಯ ನೆರವು ಪಡೆದು ಉತ್ತಮ ಸಾಧನೆ ಮಾಡಬೇಕೆಂದುಹೇಳಿದರು.

ಬಳ್ಳಾರಿ ಕೆನರಾ ಬ್ಯಾಂಕ್ ಶಾಖೆಯ ಸಹಾಯಕ ವ್ಯವಸ್ಥಾಪಕ ವಿರೇಶ ಥಳ0ಗೆ ಮಾತನಾಡಿ, ಒಂದು ಕಾಲದಲ್ಲಿ ನಾನು ಕೂಡ ವಿದ್ಯಾ ಪೋಷಕ ಸಂಸ್ಥೆಯಿಂದ ಆರ್ಥಿಕ ನೆರವುಪಡೆದಿದ್ದೆ. ನನ್ನಂತೆ ಅನೇಕರು ವಿದ್ಯಾ ಪೋಷಕ ಸಂಸ್ಥೆಯ ನೆರವು ಪಡೆದಿದ್ದಾರೆ. ಇಂದಿನ ವಿದ್ಯಾರ್ಥಿಗಳು ಸಹ ಸಂಸ್ಥೆಯ ನೆರವು ಪಡೆದು ಉತ್ತಮ ಸಾಧನೆ ಮಾಡಬೇಕೆಂದುಹೇಳಿದರು.

ಜಯರಾಮ.ಎಸ್ ಅವರು ಕಾರ್ಯಕ್ರಮದ ನಂತರ ಮಕ್ಕಳಿಗೆ ಒಂದು ಗಂಟೆ ವ್ಯಕ್ತಿತ್ವ ವಿಕಸನ ತರಗತಿ ನಡೆಸಲಾಯಿತು.

ವಿದ್ಯಾ ಪೋಷಕ ಸಂಸ್ಥೆಯ ಕಾಯ9ಕ್ರಮ ನಿವಾ9ಹಕ ಎಮ್..ನಾಯಕ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸುಧಾ, ಪ್ರಿಯಾ ಕುಲಕಣಿ9, ಪಿ.ಎಲ್. ಹಿರೇಮಠ, ಡಾ. ರಮೇಶ ಬಿರಾದಾರ, ಎಸ್.ಕೆ ಹುನ್ನೂರ. ಮಲ್ಲಿಕಾರ್ಜುನ ಕಟ್ಟಿ, ಲಿಂಗಪ್ಪ, ಹಳೆಯ ವಿದ್ಯಾಥಿ9ಗಳ ಸ0ಘ ಸೇರಿದಂತೆ ಹಲವರು ಇದ್ದರು. ರೇಣುಕಾ ವಾಲೀಕಾರ ನಿರೂಪಿಸಿದರು. ದಾನಮ್ಮಾ ಮಳಿಮಠ ವಂದಿಸಿದರು.

2024-25ನೇ ಸಾಲಿನಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ 209 ವಿದ್ಯಾರ್ಥಿಗಳಿಗೆ 25.50 ಲಕ್ಷಗಳಷ್ಟು ಧನ ಸಹಾಯವನ್ನುನೀಡಲಾಗಿದೆ.

# ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸಿ



**ಗದಗ :** ಜಿಲ್ಲೆಯಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಅಚರಣೆಯ ಕು-ರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಯಾವುದೇ ಲೋಪಗಳಿಲ್ಲದಂತೆ ಆಚರಿಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಸಮಿತಿಯವರು ವಿಶೇಷ ಆಸಕ್ತಿಯಿಂದ ಕೆಲಸ ನಿರ್ವಹಿಸಬೇಕೆಂದು ಸೂಚಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಕನ್ನಡ ರಾಜ್ಯೋತ್ಸವದ ದಿನದ ಹಿಂದಿನ ದಿನ ಹಾಗೂ ಕನ್ನಡ ರಾಜ್ಯೋತ್ಸವದ ದಿನ ಎರಡು ದಿನ ಸರ್ಕಾರಿ ಕಚೇರಿ ಹಾಗೂ ನಗರದ ವಿವಿಧ ವೃತ್ತಗಳಲ್ಲಿ ಸ್ವಚ್ಛತೆಯೊಂದಿಗೆ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.

ಅಂದು ಬೆಳಿಗ್ಗೆ 7.30 ಗಂಟೆಗೆ ಗದಗ ಬೆಟಗೇರಿ ನಗರಸಭೆ ಪದವಿ ಪೂರ್ವ ಕಾಲೇಜ ಆವರಣದಿಂದ ತಾಯಿ ಭುವನೇಶ್ವರಿಯ ಮೆರವಣಿಗೆಯು ವಿವಿಧ ವೃತ್ತಗಳಲ್ಲಿ ಸಂಚರಿಸಿ ನಂತರ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ತಲುಪಲಿದೆ. ಬೆ.9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ನೆರವೇ-ರಿಸುವರು. ಕಾರ್ಯಕ್ರಮಕ್ಕೆ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕಾಗುತ್ತದೆ. ನಂತರ ಪೊಲೀಸ್ ಪಡೆ, ಹೋಮಗಾರ್ಡ, ಭಾರತ ಸೇವಾ ದಳಗಳಿಂದ ಪರೇಡ್, ಪಥ ಸಂಚಲನ ಜರುಗಲಿವೆ. ಕಾರ್ಯಕ್ರಮದ ಸ್ಥಳದ ಸ್ವಚ್ಛತೆ ಹಾಗೂ ಅತಿಥಿಗಳಿಗೆ ಆಸನದ ವ್ಯವಸ್ಥೆ , ಅಲ್ಪೋಪಹಾರದ ವ್ಯವಸ್ಥೆ ಕುರಿತು ಕ್ರಮ ಕೈಗೊಳ್ಳಬೇಕು. ಶಿಷ್ಟಾಚಾರದನ್ವಯ ಅತಿಥಿ ಗಣ್ಯರ ಅಹ್ವಾನ ಹಾಗೂ ಆಮಂತ್ರಣ ಪತ್ರಿಕೆ ಮುದ್ರಣಕ್ಕೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ವಿವಿಧ ರಂಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪರಿಣಿತರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಪಂಚಾಯತ್‌ದ ಯೋಜನಾಧಿಕಾರಿ ನಿರ್ಮಲಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟ್ಟೂರ, ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ಮಹೇಶ ಪೊ?ತದಾರ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಯುವಜನ ಮತ್ತು ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಎಲ್. ಬಾರಾಟಕ್ಕೆ, ಲೋಕೋಪಯೋಗಿ ಇಲಾಖೆ ಅಧಿಕಾರಿ ಪಾಟೀಲ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಬಂಜಾರ ಜನಾಂಗಕ್ಕೆ ಆಭರಣ ತರಬೇತಿ ಕಾರ್ಯಾಗಾರ



**ವಿಜಯಪುರ, :** ಬಂಜಾರ ಆಭರಣ ತಯಾರಿಕೆ ಕಾರ್ಯಾಗಾರದ ಸದುಪಯೋಗ ಪಡಿಸಿಕೊಂಡು ಶಿಬಿರಾರ್ಥಿಗಳು ಜೀವನವನ್ನು ಉನ್ನತ ಮಟ್ಟಕ್ಕೆ ತಗೆದುಕೊಂಡು ಹೋಗಬೇಕು ಎಂದು ಬರಟಗಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಕವಿತಾ ರಜಪೂತ ಹೇಳಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಹಾಗೂ ಬರಟಗಿ ಗ್ರಾಮ ಪಂಚಾಯತಿ ಸಹಕಾರದೊಂದಿಗೆ 10 ದಿನಗಳ ಬಂಜಾರ ಆಭರಣ ತಯಾರಿಕಾ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಬಂಜಾರ ಆಭರಣ ತಯಾರಿಕೆ ಶಿಬಿರದಲ್ಲಿ ಬಂಜಾರ ಕರಕುಶಲ ಕಲೆಯ ಬಗ್ಗೆ ಹೆಚ್ಚಿನ ಮಾಹಿತಿ ಸಿಗುತ್ತದೆ. ಇದರಿಂದ ಬಂಜಾರ ಕೌಶಲ್ಯ ಅಭಿವೃದ್ಧಿಗೆ ಸಹಾಯಕಾರಿಯಗುತ್ತದೆ ಎಂದರು.

ರಾಮನಗೌಡ ಬಿರಾದಾರ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ, ಬಂಜಾರ-ರಿಗೆ ಅವರ ಕಲೆ, ಕೌಶಲ್ಯದ ಬಗ್ಗೆ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಲ್ಯಾಣಸಿಂಗ್ ಹಜೇರಿ ಅವರು ಆಭರಣಗಳ ಹೊಸ ವಿನ್ಯಾಸ ಕು-ರಿತು ಮಾತನಾಡಿದರು.

ಖ್ಯಾತ ಬಂಜಾರಾ ಗಾಯಕ ಆರ್.ಬಿ. ನಾಯಕ ಮಾತನಾಡಿ, ಇಂದಿನ ಯುವ ಪೀಳಿಗೆಯು ಆಭರಣ ತಯಾರಿಕೆಯನ್ನು ಕಲೆತುಕೊಳ್ಳುವುದರ ಜೊತೆಗೆ ಹೊಸ ಹೊಸ ವಿನ್ಯಾಸದ ಆಭರಣಗಳನ್ನು ಹೇಗೆ ತಯಾ-ರಿಸಬೇಕು ಎಂಬುದನ್ನು ಕಲೆತು ಮಾರುಕಟ್ಟೆಗೆ ತರಬೇಕೆಂದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸದಸ್ಯೆ ಡಾ. ಸುರೇಖಾ ರಾಠೋಡ ಸ್ವಾಗತಿಸಿದರು. ಮಂಜುಳಾ ಚವ್ಹಾಣ ನಿರೂಪಿಸಿದರು. ಗೋವಿಂದ ಸಿಂಧೆ ವಂದಿಸಿದರು. ಸಮಾರಂಭದಲ್ಲಿ ಸದಾಶಿವ ಪೂಜಾರಿ, ಧನರಾಜ ಪತ್ತಾರ, ದತ್ತಾ ಕಾಟಕರ, ಸದು ಶಿವಾಜಿ, ಸುಭಾಸ ರಜಪೂತ, ಗುಲಾಬಸಿಂಗ್ ಪತ್ತಾರ, ಧರ್ಮಸಿಂಗ್ ಪತ್ತಾರ, ಸುರೇಶ ಪತ್ತಾರ, ಹನಮಸಿಂಗ್ ಪತ್ತಾರ, ಬಾಬು ಪತ್ತಾರ, ಗೀತಾ ಪತ್ತಾರ ಮತ್ತಿತರು ಭಾಗವಹಿಸಿದ್ದರು.

# ಭಾರತೀಯ ಸಂಸ್ಕೃತಿಯ ಅಸ್ಮಿತೆ ಮಹರ್ಷಿ ವಾಲ್ಮೀಕಿ: ನ್ಯಾಯವಾದಿ ದಾನೇಶ ಅವಟಿ



**ವಿಜಯಪುರ ;** ರಾಮಾಯಣದಂತಹ ಪೂಜ್ಯನೀಯ ಗ್ರಂಥವನ್ನು ರಚಿಸಿ.ಲೋಕಕ್ಕೆ ನೀಡಿ ಉಪಕರಿಸಿದ ಶ್ರೇಷ್ಠ ಕವಿ ಮಹರ್ಷಿ ವಾಲ್ಮೀಕಿ ಎಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ನ್ಯಾಯವಾದಿ ದಾನೇಶ ಅವಟಿ ನುಡಿದರು.

ಇಂಡಿ ಪಟ್ಟಣದ ಶ್ರೀ ದಾನಮ್ಮದೇವಿ ಮಹಿಳಾ ಶೈಕ್ಷಣಿಕ ಹಾಗೂ ಸಮಾಜ ಸೇವಾ ಸಂಸ್ಥೆಯ ಮಕ್ಕಳ ತೆರೆದ ತಂಗುದಾಣದಲ್ಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬುಡಕಟ್ಟು ಜನಾಂಗದಲ್ಲಿ ಜನಿಸಿ ಅರಣ್ಯವಾಸಿಯಾಗಿದ್ದ ರತ್ನಾಕರ.ಬೇಟೆಗಾರಿಕೆ.ಜನರ ಸುಲಿಗೆ ಮಾಡುವ ವ್ಯಕ್ತಿ. ದೇವನೊಲುಮೆಯಿಂದ ಮನ ಪರಿವರ್ತಿತನಾಗಿ ನಿರಂತರ ರಾಮನಾಮ ಜಪಿಸಿ ತಪಸ್ಸು ಮಾಡಿದ ಆತನಿಗೆ ಮೈ ಮೇಲೆ ಹುತ್ತು ಬೆಳೆದ ಕಾರಣ ವಾಲ್ಮೀಕಿ ಎಂದು ನಾಮಾಕಿತನಾಗಿ ಪ್ರಸಿದ್ಧನಾದ. ರಾಮ ರಾಜ್ಯವನ್ನು ಕಣ್ಣಾರೆ ಕಂಡ ಅವರು ಗರ್ಭಿಣಿಯು ಸೀತಾಮಾತೆ ಅರಣ್ಯವಾಸಿಂಯಾದಾಗ. ತಮ್ಮ ಆಶ್ರಮದಲ್ಲಿ ಮಗಳಂತೆ ಸಲುಹಿ ಲವ-ಕುಶರಿಗೇ ಜನ್ಮ ನೀಡಿದಾಗ ಅವರಿಗೆ ಶಸ್ತ್ರ. ಶಾಸ್ತ್ರ.ವಿದ್ಯೆ. ವಿನಯ. ಸಂಸ್ಕಾರ. ಮಾನವೀಯ ಗುಣಗಳನ್ನು ಬೆಳೆಸುವ ಮೂಲಕ ರಾಜ ಪರಿವಾರ ಒಂದಾಗಿಸುವ ಪ್ರಯತ್ನ ಮಾಡಿದರು. ರಾಮಾಯಣ ಒಂದು ಮೌಲಿಕ ಕೃತಿಯಾಗಿದ್ದು ಸಾಮಾಜಿ-ಕ ನ್ಯಾಯ.ನೀತಿ ಧರ್ಮವನ್ನು ಬೋಧಿಸುವಲ್ಲಿ ಮಾನವ ಜನಾಂಗಕ್ಕೆ ಕೈ ದೀವಿಗೆಯಾಗಿದೆ ಎಂದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ಯಲ್ಲಪ್ಪ ಈರಕಲ್, ಸೂರ್ಯಕಾಂತ ಬಿರಾದಾರ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷೆ ನೀಲಮ್ಮ ಮಠಪತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇದೇ ವೇಳೆ ರಾಮ ನಾಮ ಶ್ಲೋಕಗಳನ್ನು. ಮಕ್ಕಳು ಸುಶ್ರಾವ್ಯವಾಗಿ ಪಠಿಸಿದರು.

ಸುನೀತಾ ಸಾಲೋಟಗಿ, ಪ್ರೇಮಾ ಪೂಜಾರಿ, ದೊಡಬಾಯಿ ಮಠಪತಿ, ಅಂಬಿಕಾಮಾಲಿ ಪಾಟೀಲ್ ಉಪಸ್ಥಿತರಿದ್ದರು.

ಕಾರ್ಯಕ್ರಮ ಸಂಯೋಜ-ಕ ಮಹಾಂತೇಶ ಮಠಪತಿ ಸ್ವಾಗತಿಸಿದರು. ಬಸವರಾಜ್ ಆಲೂರು ನಿರೂಪಿಸಿದರು. ಅನೀಲ ದುದಗಿ ವಂದಿಸಿದರು.

ಮಹಾಂತೇಶ ಮಠಪತಿ, ಪ್ರೇಮಾ ಪೂಜಾರಿ ಹಾಗೂ ಸಿಬ್ಬಂದಿಗಳಾದ ಬಸವರಾಜ ಆಲೂರ ಮುಂತಾದವರು ಇದ್ದರು.

# ಶರಣರ ವಿಚಾರದಿಂದ ಬದುಕು ಬಂಗಾರ ಪರಶುರಾಮ

**ತಾಳಿಕೋಟೆ,** ಬಸವಣ್ಣನವರ ತತ್ವಗಳಂತಹ ಅವರ ವಿಚಾರಗಳನ್ನು ಹಾಗೂ ವಚನಗಳನ್ನು ಅರ್ಥೈಯಿಸಿಕೊಂಡು ನಡೆದರೆ ಮಾನವೀಯ ಮೌಲ್ಯವೆಂಬುದು ದೊರೆಯುತ್ತದೆ ಅಲ್ಲದೇ ಇದರಿಂದ ಬದುಕು ಎಂಬುದು ಬಂಗಾರವಾಗುತ್ತದೆ ಎಂದು ನಾಲತವಾಡದ ವಿರೇಶ್ವರ ಮಹಾವಿದ್ಯಾಲಯದ ಉಪನ್ಯಾಸಕರಾದ ಪರಶುರಾಮ ಚೌಡಕೇರ ಅವರು ನುಡಿದರು.

ಶುಕ್ರವಾರರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಳಿಕೋಟೆ ಘಟಕ ಹಾಗೂ ಎಸ್.ಕೆ. ಶಿಕ್ಷಣ ಮಹಾವಿದ್ಯಾಲಯ ತಾಳಿಕೋಟೆ ಇವುಗಳ ಸಹಯೋಗದೊಂದಿಗೆ ಮಹಾವಿದ್ಯಾಲಯದ ವಿರಕ್ತೇಶ್ವರ ಸಭಾ ಭವನದಲ್ಲಿ ಏರ್ಪಡಿಸಲಾದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ಎಂಬ ವಿಷಯ ಕುರಿತು ಮಾತನಾಡುತ್ತಿದ್ದ ಅವರು ನಮ್ಮ ಬದುಕು ಬಂಗಾರವಾಗಬೇಕಾದರೆ ತತ್ವಜ್ಞಾನವನ್ನು ಅರ್ಥೈಯಿಸಿಕೊಳ್ಳಬೇಕು ತತ್ವಜ್ಞಾನ ಇದು ಅತೀವ ಸೂಕ್ಷ?ಮವಾಗಿದೆ ಅದು ಹಿಡಿದರೆ ಸಿಗುವಂತಹದ್ದಲ್ಲಾ ಅದು ಗುರುವಿನ ಗುಲಾಮನಾಗುವ ತನಕ ಸಿಗುವಂತಹದ್ದಲ್ಲವೆಂದರು.

ಮನುಷ್ಯರಲ್ಲಿ 6 ವೈರಿಗಳಿವೆ ಅವುಗಳೇ ಕಾಮ, ಕ್ರೋಧ, ಮದ, ಮತ್ಸರ ಇವುಗಳನ್ನು ಅಳಿದರೆ ಕಾಣದ್ದನ್ನು ಕಾಣಬಹುದಾಗಿದೆ ಎಂದರು.

ಮನುಷ್ಯನ ಜನ್ಮದ ಲಾಭವೆಂದರೆ ತಿಳಿದುಕೊಂಡವರಾಗಿದ್ದಾರೆಂದು ಶ್ರೀ ಖಾಸ್ಗತರ ವಿರಕ್ತ ಶ್ರೀಗಳ, ಸಿದ್ದಲಿಂಗದೇವರ ಅಲ್ಲದೇ ಸಿದ್ದೇಶ್ವರ ಶ್ರೀಗಳಲ್ಲದೇ ತ್ರಿಕಾಲ ಜ್ಞಾನಿಯಾಗಿದ್ದ ಸಜ್ಜಲಗುಡ್ಡದ ಶರಣಮ್ಮನವರ ಪವಾಡ ದೃಶ್ಯಗಳ ಕುರಿತು ವಿವರಿಸಿದ ಅವರು ಅಂತವರ ದರ್ಶನ ಸ್ಪರ್ಶದಿಂದ ಮೋಕ್ಷದ ಮಾರ್ಗ ದೊರೆಯಲಿದೆ ಯಾರನ್ನು ನಂಬಬೇಕು ಯಾರನ್ನು ನಂಬಬಾರದು ತಿಳಿದುಕೊಳ್ಳಿ ಆದರೆ ಮಾತಾಪಿತರನ್ನು ಗೌರವದಿಂದ ಕಾಣಬೇಕೆಂದು ಬಹು ಮಾರ್ಮಿಕವಾಗಿ ಮಾನವೀಯ ಮೌಲ್ಯಗಳ ಕುರಿತು ವಿವ-ರಿಸಿದರು.

ಇನ್ನೋರ್ವ ಶರಣ ಸಾಹಿತ್ಯ ಪರಿಷತ್ ತಾಳಿಕೋಟೆ ತಾಲೂಕಿನ ಅಧ್ಯಕ್ಷರಾದ ಅಶೋಕ ಹಂಚಲಿ ಅವರು ಮಾತನಾಡಿ ವಿದ್ಯಾರ್ಥಿಯಾದವನು ಮೊದಲಿಗೆ ಬೀಜರೂಪದಲ್ಲಿರುತ್ತಾನೆ ಮುಂದೆ ಆ ಬೀಜ ಆಲದ ಮರವಾಗುತ್ತದೆ ಎಂಬುದರ ಕುರಿತು ಯಾರಿಗೂ ತಿಳಿಯುವದಿಲ್ಲ ಆದರೆ ವಿದ್ಯಾರ್ಥಿಗಳು ಮಾಡುವ ಅಧ್ಯಯನದಿಂದ ಕಾಣಬಹುದಾಗಿದೆ ಎಂದರು ಬಸವಣ್ಣನವರು ಹೇಳಿದಂತೆ ನಮ್ಮ ಕೆಲಸ ಕಾರ್ಯಗಳನ್ನು ಮೆಚ್ಚಿ ಲಿಂಗವೆಂಬುದು ಹೌದೌದು ಎನ್ನುವಂತಾಗಬೇಕೆಂದು ಬಸವಣ್ಣನವರ ಅನುಭಾವ ಹಾಗೂ ಅವರ ಎತ್ತರ ಕು-ರಿತು ವಿವರಿಸಿದರಲ್ಲದೇ ಖಾಸ್ಗತೇಶರ ಶಿಕ್ಷಣ ಮಹಾವಿದ್ಯಾಲಯದ ಬಿಎಡ್ ಕಾಲೇಜು ಪ್ರಾಚಾರ್ಯರ ಹಾಗೂ ಶಿಕ್ಷಕರ ಕಾರ್ಯವೈರ್ಯಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ ಹಂಚಲಿ ಅವರು ಪ್ರಾಚಾರ್ಯರಾದ ರಮೇಶ ಬಂಟನೂರ ಅವರು 12 ಪುಸ್ತಕಗಳನ್ನು ಹೊರತೆಗೆದಿದ್ದಲ್ಲದೇ ಅವರು ಡಾಕ್ಟರೇಟ್ ಪದವಿಯನ್ನು ಕೂಡ ಪಡೆದವರಾಗಿದ್ದಾರೆಂದರು.

ದೇಶವನ್ನು ಕಟ್ಟಬೇಕಾದರೆ ಇಟ್ಟಿಗೆ, ಸಿಮೆಂಟ್, ಕಬ್ಬಿಣ, ಉಕ್ಕಿನಿಂದ ಸಾಧ್ಯವಿಲ್ಲಾ ಅದನ್ನು ಕಟ್ಟಬೇಕಾದರೆ ಸತ್ಯ, ಧರ್ಮ, ಪ್ರೇಮ, ಶಾಂತಿಯ ವಿಚಾರ ಮಾನವೀಯ ಮೌಲ್ಯಗಳನ್ನು ಮೂಡಿಸುವದರೊಂದಿಗೆ ಮುನ್ನಡೆದರೆ ದೇಶ ಕಟ್ಟಿ ಚಾರಿತ್ರ?ಯವೆಂಬುದನ್ನು ನಿರ್ಮಾಣ ಮಾಡಲು ಸಾಧ್ಯವಾಗಲಿದೆ ಎಂದು ಹೇಳಿದ ಅವರು ಈ ಧೇಶದ ಭವಿಷ್ಯ ವಿದ್ಯಾರ್ಥಿಗಳ ಕೈಯಲ್ಲಿದೆ ಸಜ್ಜನರ ಮೌನತೆಯ ಕಾರಣದಿಂದ ಈ ದೇಶದ ಭಕ್ತಿಯೆಂಬುದು ಹಾಳಾಗುತ್ತಾಸಾಗಿದೆ ಕಾರಣ ಸ್ವಾಭಿಮಾನವೆಂಬುದು ವಿದ್ಯಾರ್ಥಿಗಳ ಎದೆಯಲ್ಲಿ ಹುಟ್ಟಬೇಕಾಗಿದೆ ಎಂದರು.

ಕಾರ್ಯಕ್ರಮದ ಮೊದಲಿಗೆ ಲಿಂ. ಸಂಗಪ್ಪ ಮುರಾಳ, ಲಿಂ. ಗುರುಬಾಯಿ ಮುರಾಳ, ಹಾಗೂ ಲಿಂ. ಮಲಕಾಜಪ್ಪ ಸಿ. ಸಾಲಂಕಿ ಅವರ ಕುರಿತು ಜರುಗಿದ ದತ್ತಿ ಸ್ಮರಣೆಯಲ್ಲಿ ಅವರ ಭಾವಚಿತ್ರಗಳಿಗೆ ಹಾಗೂ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಗೈಯಲಾಯಿತು.

# ಲಕ್ಷ್ಮೇಶ್ವರ ಬಂದ್ ಶಾಂತಿಯುತ



**ಲಕ್ಷ್ಮೇಶ್ವರ, :** ಪಟ್ಟಣದಲ್ಲಿ ಅಕ್ಟೋಬರ್ 13 ರಂದು ಗೋಸಾವಿ ಸಮಾಜದವರ ಮೇಲೆ ಪಿಎಸ್‌ಐವೋರ್ವರಿಂದ ನಡೆದಿದೆ ಎನ್ನಲಾದ ಹಲ್ಲೆ ಮತ್ತು ಶ್ರೀರಾಮ ಸೇನೆ ಕಾರ್ಯಕರ್ತರನ್ನು ಅವಮಾನಿಸಲಾಗಿದೆ ಎಂದು ಖಂಡಿಸಿ ಪಿಎಸ್‌ಐ ಅವರನ್ನು ಅಮಾನತುಗೊಳಿಸಬೇಕೆಂದು ಆಗ್ರಹಿಸಿ ಶನಿವಾರ ಶ್ರೀರಾಮ ಸೇನೆ ಮತ್ತು ಹಿಂದೂ ಪರ ಸಂಘಟನೆಗಳು ನೀಡಿದ್ದ ಬಂದ್ ಕರೆ ಶಾಂತಿಯುತವಾಗಿ ಜರಗಿತು.

ಬಂದ್‌ಗೆ ಪರ ಮತ್ತು ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಬಂದ್ ಹಿನ್ನೆಲೆಯಲ್ಲಿ ಮುಂಜಾನೆಯೇ ಪ್ರಮುಖ ಬಜಾರ್ ರಸ್ತೆ ಮತ್ತು ಹೊಸ ಬಸ್‌ನಿಲ್ದಾಣದ ರಸ್ತೆಯಲ್ಲಿನ ವ್ಯಾಪಾರಸ್ಥರು ಅಂಗಡಿ ಮುಂಗಟ್ಟುಗಳನ್ನು ಸ್ವಯಂ ಪ್ರೇರಣೆಯಿಂದ ಮಧ್ಯಾಹ್ನದವರೆಗೂ ಬಂದು ಮಾಡಿದ್ದರು.

ಮಧ್ಯಾನದ ಸುಮಾರಿಗೆ ಅಂಗಡಿ ಮುಂಗಟ್ಟುಗಳು ತೆರೆದರು ಸಹ ಜನಸಂಚಾರ ವಿರಳವಾಗಿತ್ತು. ಸಾರಿಗೆ ಸಂಪರ್ಕ ಹೋಟೆಲ್‌ಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಸ್ಥಳದಲ್ಲಿಯೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಅವರು ಮೊಕ್ಕಾಂ ಹೂಡಿದ್ದರು.

# ರಾಜ್ಯೋತ್ಸವದಲ್ಲಿ ಕಡ್ಡಾಯವಾಗಿ ಭಾಗವಹಿಸಿ-ಜಿಲ್ಲಾಧಿಕಾರಿ ಟಿ.ಭೂಬಾಲನ್ ಸೂಚನೆಸಡಗರ, ಸಂಭ್ರಮದಿಂದ ರಾಜ್ಯೋತ್ಸವ ಆಚರಣೆಗೆ ನಿರ್ಧಾರ



**ವಿಜಯಪುರ ;** ಜಿಲ್ಲಾಡಳಿತದಿಂದ ನವೆಂಬರ್ 1ರಂದು ಆಚರಿಸಲಾಗುವ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ಅಧಿಕಾರಿ, ಸಿಬ್ಬಂದಿಗಳು ಕರ್ತವ್ಯ ನಿಷ್ಠೆಯೊಂದಿಗೆ ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಕನ್ನಡಾಭಿಮಾನ ಮೆರೆಯಬೇಕು ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಹೇಳಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡ ಕರ್ನಾಟಕ ರಾಜ್ಯೋತ್ಸವ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ಅಧಿಕಾರಿ, ಸಿಬ್ಬಂದಿಗಳು, ವಿವಿಧ ಕನ್ನಡ ಪರ ಸಂಘಟನೆಗಳು, ಸೇ-ರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜ್ಯೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿಕೊಂಡರು.

ಗೈರ ಹಾಜರಾಗುವ ಅಧಿಕಾರಿಗಳಿಗೆ ನೋಟಿಸ್ :

ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾ-ರಿಗಳು ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳುವ ತಾಯಿ ಭುವನೇಶ್ವರ ಭಾವಚಿತ್ರ ಮೆರವಣಿಗೆ ಹಾಗೂ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಸೂಚಿಸಿದ ಅವರು, ಕಾರ್ಯಕ್ರಮದಲ್ಲಿ ಗೈರ ಹಾಜರಾಗುವ ಅಧಿಕಾರಿಗಳಿಗೆ ನೋಟಿಸ್ ನೀಡಿ, ಗೈರಾದ ಅಧಿಕಾರಿಗಳ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಅಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ವಹಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ರಾಜ್ಯೋತ್ಸವ ಕಾರ್ಯಕ್ರಮದ ವಿವಿಧ ಸಿದ್ಧತೆಗಳ ವ್ಯವಸ್ಥೆಗೆ ವಿವಿಧ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ ಅವರು, ರಾಜ್ಯೋತ್ಸವ ಸಂದೇಶ ತಯಾರಿಗಾಗಿ ವಿವಿಧ ಇಲಾಖೆಗಳ ಪ್ರಗತಿ ವರದಿಯನ್ನು ಅಕ್ಟೋಬರ್ 25ರೊಳಗಾಗಿ ಸಲ್ಲಿಸುವಂತೆ ಅವರು ಸೂಚನೆ ನೀಡಿದರು.

ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಕನ್ನಡ ಭಾಷೆ, ನೆಲ, ಜಲ ಕುರಿತು ಜಿಲ್ಲಾ ಮಟ್ಟದ ಹಾಗೂ ತಾಲೂಕಾ ಮಟ್ಟದ ಕ್ವಿಜ್ ಸ್ಪರ್ಧೆಗಳನ್ನು ವಿದ್ಯಾರ್ಥಿಗಳಿಗೆ ಏರ್ಪಡಿಸಿ, ಅತ್ಯುತ್ತಮ 3 ಜಿಲ್ಲಾ ಮಟ್ಟದ ವಿಜೇತರಿಗೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ ನೀಡಲು ತೀರ್ಮಾನಿಸಲಾಯಿತು.

ಕನ್ನಡ ನಾಮ ಫಲಕ ಬಳಕೆಗೆ ಕಟ್ಟುನಿಟ್ಟಿನ ಸೂಚನೆ :

ಸರ್ಕಾರದ ಆದೇಶದಂತೆ ಜಿಲ್ಲೆಯಲ್ಲಿ ಕಡ್ಡಾಯವಾಗಿ ಕನ್ನಡ ನಾಮಫಲಕಗಳನ್ನು ಅಳವಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದ ಜಿಲ್ಲಾಧಿಕಾರಿಗಳು, ಸರ್ಕಾರದ ಆದೇಶದಂತೆ ನಾಮಫಲಕಗಳು ಶೇ.60 ರಷ್ಟು ಕನ್ನಡ ಭಾಷೆ ಒಳಗೊಂಡಿರಬೇಕು.

ಶೇ.40 ರಷ್ಟು ಉಳಿದ ಭಾಷೆಗಳನ್ನು ಬಳಸಲು ಅವಕಾಶವಿದ್ದು, ಇದೇ ಅಕ್ಟೋಬರ್ 30ರೊಳಗೆ ಜಿಲ್ಲೆಯ ಎಲ್ಲ ನಾಮಫಲಕಗಳು ಕನ್ನಡ ಭಾಷೆಯನ್ನು ಒಳಗೊಂಡಿರಬೇಕು. ಅಕ್ಟೋಬರ್ 31ರ ನಂತರ ಕನ್ನಡ ಭಾಷೆ ಒಳಗೊಳ್ಳದ ನಾಮಫಲಕಗಳನ್ನು ಮುಟ್ಟುಗೋಲು ಹಾಕಿ, ಸಂಬಂಧಿಸಿದ ಅಂಗಡಿ, ಸಂಸ್ಥೆಗಳ ಮೇಲೆ ಯಾವುದೇ ಮುಲಾಜಿಲ್ಲದೇ ಕ್ರಮ ವಹಿಸಲಾಗುವುದು ಎಂದು ಅವರು ಹೇಳಿದರು.

ಕನ್ನಡ ನಾಮಫಲಕ ಅಳವಡಿಕೆಗೆ ಜಾಗೃತಿ :

ಜಿಲ್ಲೆಯಲ್ಲಿರುವ ವಿವಿಧ ಸರ್ಕಾರಿ ಸೇ-ರಿದಂತೆ ಖಾಸಗಿ ಕಚೇರಿ, ಶಾಲೆ, ಆಸ್ಪತ್ರೆ ಅಂಗಡಿ ಮುಂಗಟ್ಟುಗಳಲ್ಲಿ ಕಡ್ಡಾಯವಾಗಿ ಕನ್ನಡ ನಾಮಫಲಕ ಅಳವಡಿಸುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳು, ವಿವಿಧ ಕನ್ನಡ ಪರ ಸಂಘಟನೆಗಳೊಂದಿಗೆ ಅ. 20 ರಂದು ಜಾಗೃತಿ ಹಮ್ಮಿಕೊಳ್ಳಲಾಗುವುದು. ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಸೊಲ್ಲಾಪುರ ರಸ್ತೆಯಲ್ಲಿರುವ ಬಂಜಾರಾ ಕ್ರಾಸ್‌ದಿಂದ ಆರಂಭಗೊಳಿಸಿ, ನಗರದ ವಿವಿಧೆಡೆ ಇರುವ ಅಂಗಡಿಗಳಲ್ಲಿ ಕನ್ನಡ ನಾಮಫಲಕಗಳ ಕುರಿತು ಜಾಗೃತಿ ಮೂಡಿಸಲು ನಿರ್ಧ-ರಿಸಲಾಯಿತು.

ರಾಜ್ಯೋತ್ಸವ ಕಾರ್ಯಕ್ರಮ ಪೂರ್ವಸಿದ್ಧತೆ : ನವೆಂಬರ್ 1 ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹಮ್ಮಿಕೊಂಡ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಹಾಗೂ ತಾಯಿ ಭುವನೇಶ್ವರ ಮೆರವಣಿಗೆ ಕಾರ್ಯಕ್ರಮದ ಪೂರ್ವಸಿದ್ಧತೆ ಮಾಡಿಕೊಳ್ಳುವಂತೆ ವಿವಿಧ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಮಹಾನಗರ ಪಾಲಿಕೆ ವತಿಯಿಂದ ನಗರದ ವಿವಿಧ ರಸ್ತೆ, ವೃತ್ತಗಳ ಸ್ವಚ್ಛತೆ, ದೀಪಾಂಲಕಾರ ವ್ಯವಸ್ಥೆ, ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ವೇದಿಕೆ, ಆಸನಗಳ ವ್ಯವಸ್ಥೆ, ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ ಸನ್ಮಾನ, ಧ್ವನಿವರ್ಧಕ, ಸೌಂಡ್‌ಸಿಸ್ಟಮ್ ವ್ಯವಸ್ಥೆ, ಸಿಂಥೆಟಿಕ್ ಟ್ರಾ?ಯಕ್ ನಿರ್ಮಾಣ, ರಾಜ್ಯೋತ್ಸವ ಅಂಗವಾಗಿ ವಿವಿಧ ಇಲಾಖೆಗಳಿಂದ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನೊಳಗೊಂಡ ಸ್ತಬ್ಧಚಿತ್ರ ನಿರ್ಮಾಣ ಹಾಗೂ ವಿವಿಧ ಸರ್ಕಾರಿ ಕಚೇರಿಗಳನ್ನು ದೀಪಾಲಂಕಾರಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕಾಯಕ್ರಮದ ಆಮಂತ್ರಣ ಪತ್ರಿಕೆ, ಶಿಷ್ಠಾಚಾರದಂತೆ ಜನಪ್ರತಿನಿಧಿಗಳಿಗೆ ಆಹ್ವಾನ, ವ್ಯವಸ್ಥಿತವಾಗಿ ನಾಡಗೀತೆ, ಸಾಮೂಹಿಕ ಕವಾಯತು, ಪಥಸಂಚಲನ, ಎನ್‌ಸಿಸಿ,ಎನ್‌ಎಸ್‌ಎಸ್, ಸ್ಕೌಟ್ಸ್ ಆಂಡ್ ಗೈಡ್ಸ್, ವಿವಿಧ ಶಾಲೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾರಿಗೆ ವ್ಯವಸ್ಥೆ, ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಅಲ್ಪೋಪಹಾರ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, ಸಂಜೆ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ಸಿದ್ಧತೆ ಮಾಡಿಕೊಳ್ಳುವಂತೆ ವಿವಿಧ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ, ಹೆಚ್ಚುವರಿ ಪೊಲೀಸ್ ವ-ರಿಷ್ಠಾಧಿಕಾರಿ ಶಂಕರ ಮಾರಿಹಾಳ, ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕ ಬಿ.ಎಸ್. ರಾಠೋಡ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತ-ರಿದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಸಿಂಪೀರ ವಾಲೀಕಾರ, ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರಾದ ಫಯಾಜ್ ಕಲಾದಗಿ, ಸೋಮನಗೌಡ ಕಲ್ಲೂರ, ದೇವೇಂದ್ರ ಮಿರೇಕರ, ಭೀಮರಾಯ ಜಿಗಜಿಣಗಿ, ರಮೇಶ ಕುಲಕರ್ಣಿ, ದಯಾನಂದ ಸಾವಳಗಿ, ದಸ್ತಗೀರ ಸಾಲೋಟಗಿ ಸೇರಿದಂತೆ ವಿವಿಧ ಮುಖಂಡರು ಸಭೆಯಲ್ಲಿ ಉಪಸ್ಥಿತ-ರಿದ್ದು, ವಿವಿಧ ಸಲಹೆಗಳನ್ನು ನೀಡಿದರು.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com